ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೦೨
ವಿಚಾರ ಸಾಹಿತ್ಯಮಾಲೆ – ೨೩
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಕಾಯಕ ಸಿದ್ಧಾಂತ

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ
ಮೂಲ ಸಂಪಾದಕರು
**ಕೆ.ಎಂ. ಮುನ್ಷಿ**
**ಆರ್.ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ.ಕೆ. ಬಿರ್ಲಾ** – ಸದಸ್ಯರು
**ಎಸ್.ಜಿ. ನೇವಾತಿಯ** – ಸದಸ್ಯರು
**ಜಿ.ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್.ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ.ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)




# ಕಾಯಕ ಸಿದ್ಧಾಂತ

**ಆ ನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**
**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**
**–ಋಗ್ವೇದ, I. ೮೯–೧**


ಮೂಲ
**ಸ್ವಾಮಿ ರಾಮತೀರ್ಥ**

ಸಂಕಲನ
**ಎಸ್.ಆರ್. ಶರ್ಮ**

ಅನುವಾದ
**ಶ್ರೀಮತಿ ನಯನಾ ಕಾಶ್ಯಪ್**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Kayaka Siddhanta :** Kannada Translation of *Gospel of Work* by **Swami Ramatirtha;** Compiled by **S. R. Sharma;** Kannada Translation by **Smt. Nayana Kashyap;** Editor-in-Chief : **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxii + 41 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxii + ೪೧
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು - ೫೬೦ ೦೦೧
ದಿನಾಂಕ : ೫-೮-೨೦೦೯
ಸಿಎಂ/ಪಿಎಸ್/೧೪೭/೦೯

# ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು-ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ-ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ-ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ-ಸೂಚನೆ-ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ-ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ-ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝುಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝುಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

## ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ



ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೦೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

### (ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ.ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ.ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.



ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತುಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾ ಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಶಾಖೆಯ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿಕೊಟ್ಟಿರುವ ಶ್ರೀಮತಿ ನಯನಾ ಕಾಶ್ಯಪ್ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎಚ್.ಎಂ. ನಾಗರಾಜರಾವ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಕಾಯಕ ಸಿದ್ಧಾಂತ' ಎಂಬ ಪುಸ್ತಕ ಖ್ಯಾತ ಲೇಖಕಿ ಶ್ರೀಮತಿ ನಯನಾ ಕಾಶ್ಯಪ್ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ.ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ
ವಿಜಯದಶಮಿ, ಸೆಪ್ಟೆಂಬರ್ ೨೮,೧೯೬೩

**ಕೆ. ಎಂ. ಮುನ್ಷಿ**

## ಸಂಕಲನಕಾರರ ನುಡಿ

ನವೋದಯ ಭಾರತದ ತೇಜಸ್ವಿ ಹರಿಕಾರರಲ್ಲೊಬ್ಬರು ಸ್ವಾಮಿ ರಾಮತೀರ್ಥರು. ಅತಿ ವೇಗವಾಗಿ ಬೆಳೆದ ಅವರ ವೃತ್ತಿಜೀವನ ೧೯೦೬ರಲ್ಲಿ ಅವರ ಮೂವತ್ತ ಮೂರನೆಯ ವಯಸ್ಸಿನಲ್ಲಿಯೇ ಅಂತ್ಯ ಕಂಡಿತು.

'ಕಾರ್ಯಶೀಲ ವೇದಾಂತ'ವೆಂದು ಅವರು ಕರೆಯುತ್ತಿದ್ದುದರ ಪರಿಣಾಮಕಾರಿ ತಿರುಳನ್ನು ಸಾರುವ 'ಕಾಯಕ ಸಿದ್ಧಾಂತ'ವೆಂಬ ಈ ಚಿಪ್ಪಿನಂಥ ಕೃತಿಯಲ್ಲಿ ಅವರ ಬದುಕು, ಬೋಧನೆಗಳ ಸ್ಫೂರ್ತಿದಾಯಕ ಸಂದೇಶವಿದೆ.

"ವೇದಾಂತವನ್ನು ದಿನನಿತ್ಯದ ಬದುಕಿನಲ್ಲಿ ಪಾಲಿಸದಿದ್ದರೆ ಪ್ರಯೋಜನವೇನು?" ಎಂದು ಸ್ವಾಮಿ ರಾಮತೀರ್ಥರು ಸತತ ಪ್ರಶ್ನಿಸುತ್ತಿದ್ದರು. "ವೇದಾಂತವೆಂಬುದು ಪರಿಪೂರ್ಣ ಸತ್ಯ; ಅದನ್ನು ಪರಿಪೂರ್ಣವಾಗಿ ಜೀವಿಸದಿದ್ದರೆ ಅದು ನಮ್ಮನ್ನು ಕೊಲ್ಲುತ್ತದೆ," ಎನ್ನುತ್ತಿದ್ದರು.

ಉಪನಿಷತ್ತುಗಳ ಉಪದೇಶಗಳನ್ನು ಎತ್ತಿಹಿಡಿಯುತ್ತ 'ಯಶಸ್ಸಿನ ಗುಟ್ಟು' ಎಂಬುದರ ಕುರಿತು ನವೀನ ರೀತಿಯಲ್ಲಿ ಜಪಾನ್ ಮತ್ತು ಯು.ಎಸ್.ಎ.ನಲ್ಲಿ ಉಪನ್ಯಾಸ ನೀಡಿದ್ದರು. ಇಂಡಿಯಾದ ವಿದ್ಯಾರ್ಥಿಗಳನ್ನುದ್ದೇಶಿಸಿ, ಗಣಿತದಲ್ಲಿ ಪಾಂಡಿತ್ಯ ಸಾಧಿಸುವ ಬಗೆಯ ಬಗ್ಗೆ, ಮತ್ತು ಅದರ ಮೂಲಕ "ನಾವು ಬಂದಾಗ ಇದ್ದದ್ದಕ್ಕಿಂತ ಉತ್ತಮವಾದ ಪ್ರಪಂಚವನ್ನು ಬಿಟ್ಟುಹೋಗುವ" ಉದ್ದೇಶ, ಶಿಸ್ತು ಕಲಿಸುವ ಶಿಕ್ಷಣ ಪಡೆಯುವುದರ ಕುರಿತು ಮಾತನಾಡಿದ್ದರು.

ಪ್ರತಿಯೊಬ್ಬನ ಪರಮ ಧ್ಯೇಯವಾಗಿರುವ ರಾಷ್ಟ್ರೀಯ ಪುನರ್‌ಸೃಷ್ಟಿ ಮತ್ತು ಆತ್ಮ ಸಾಕ್ಷಾತ್ಕಾರಕ್ಕೆ ಅವರಿತ್ತ ಕರೆಯನ್ನು ಒತ್ತಿ ಹೇಳುವ ಭಾಗಗಳನ್ನು ಸ್ವಾಮಿ ರಾಮರ ಬರಹ, ಉಪನ್ಯಾಸಗಳಿಂದ ಆಯ್ದು ಈ ಕಿರುಹೊತ್ತಗೆಯಲ್ಲಿ ನೀಡಲಾಗಿದೆ. ಜೀವನದಲ್ಲಿ ತಾನು ಪ್ರಯೋಗಿಸಿದ್ದನ್ನು ಮಾತ್ರ ಅವರು ಬೋಧಿಸಿದರು. ಅವರ ಮನವಿ ಏಕಕಾಲಕ್ಕೆ ವೈಯಕ್ತಿಕ, ರಾಷ್ಟ್ರೀಯ ಮತ್ತು ಸಾರ್ವಕಾಲಿಕವಾಗಿತ್ತು. ದೀನಬಂಧು ಸಿ. ಎಫ್. ಆಂಡ್ರೂಸ್‌ರವರು ಸ್ವಾಮಿ ರಾಮರ ಕುರಿತು ಹೀಗೆ ಹೇಳಿದ್ದಾರೆ: "ತನ್ನ ಸಂದೇಶವನ್ನು ಸ್ಪಷ್ಟಗೊಳಿಸುವ ದಿಸೆಯಲ್ಲಿ ಅವರಾಡುವ ಪ್ರತಿಯೊಂದು ಶಬ್ದದಲ್ಲಿಯೂ ಅವರ ಹೃದಯ ಹೊರಹೊಮ್ಮುತ್ತದೆ; ಅದು ಅವರದೇ ಅನುಭವದಿಂದ ಬಂದ ಸಂದೇಶ, ಬೇರೊಬ್ಬರದಲ್ಲ."

**ಎಸ್. ಆರ್. ಶರ್ಮ**



## ಪರಿವಿಡಿ


| | | |
|---|---|---|
| | ಮೊದಲ ಮಾತು | v |
| | ಶುಭಾಕಾಂಕ್ಷೆ | vi |
| | ಪ್ರಾಸ್ತಾವಿಕ ನುಡಿ | viii |
| | ಪೀಠಿಕೆ | x |
| | ಅರಿಕೆ | xvi |
| | ಮೂಲ ಸಂಪಾದಕರ ಪ್ರಸ್ತಾವನೆ | xvii |
| | ಸಂಕಲನಕಾರರ ನುಡಿ | xviii |
| ೧. | ಕಾಯಕ ಸಿದ್ಧಾಂತ | ೧ |
| ೨. | ಗಣಿತ ಶಾಸ್ತ್ರದ ಉಪಯೋಗಗಳು | ೬ |
| ೩. | ಗಣಿತ ಶಾಸ್ತ್ರದ ಶಿಸ್ತುಗಳು | ೧೧ |
| ೪. | ವಿಶ್ರಾಂತಿ ಮತ್ತು ಆರಾಮ | ೧೩ |
| ೫. | ಭಾರತದ ಸಮಸ್ಯೆ | ೧೬ |
| ೬. | ರಾಷ್ಟ್ರಧರ್ಮ | ೨೩ |
| ೭. | ಭಾರತದ ಸದ್ಯದ ಅಗತ್ಯಗಳು | ೨೭ |
| ೮. | ಭಾರತದ ಭವಿಷ್ಯ | ೩೦ |
| ೯. | ಭಾರತ ಮತ್ತು ಅಮೆರಿಕ | ೩೫ |
| ೧೦. | ಮಾನವಕುಲ ಒಂದೇ | ೪೧ |

Blank Page



# ಕಾಯಕ ಸಿದ್ಧಾಂತ

## ೧. ಕಾಯಕ ಸಿದ್ಧಾಂತ

ಎಲ್ಲ ಪುಸ್ತಕಗಳು, ಉಪದೇಶಗಳು ಸಾರಿ ಹೇಳುವುದು ನಿರಂತರ, ಸತತ ಕಾಯಕ ಸಿದ್ಧಾಂತವನ್ನೇ. ಬೆಳಕು ದೃಷ್ಟಿ ನೀಡುತ್ತದೆ. ಸಕಲ ಜೀವಿಗಳಿಗೂ ಮೂಲ ಸೆಲೆ ಬೆಳಕು. ಅಂಥ ಬೆಳಕಿನ ಸಹಾಯದಿಂದಲೇ ಕಾಯಕದ ಕುರಿತು ಬೆಳಕು ಬೀರಲು ಸಾಧ್ಯವೇ ನೋಡೋಣ. ಒಂದು ಸಾಮಾನ್ಯ ಬೆಳಕು– 'ದೀಪ'ವನ್ನೇ ನೋಡಿ. ದೀಪದ ಪ್ರಭೆ ಹಾಗೂ ತೇಜಸ್ಸಿನ ಗುಟ್ಟೇಂದರೆ ಅದು ತನ್ನ ಬತ್ತಿಯನ್ನಾಗಲೀ, ಎಣ್ಣೆಯನ್ನಾಗಲೀ ಬಳಸದೆ ಇರುವುದಿಲ್ಲ. ಬತ್ತಿ, ಎಣ್ಣೆ ಅಥವಾ ನಮ್ಮ ಸಂದರ್ಭದಲ್ಲಿ ಆತ್ಮವನ್ನು ಸಂಪೂರ್ಣ ಬಳಸಿಕೊಂಡಾಗ ಪರಿಣಮಿಸುವುದು ದಿವ್ಯ ಪ್ರಭೆ. ಎಂತಲೇ, ದೀಪ ಹೇಳುತ್ತದೆ 'ನಿನ್ನನ್ನು ಉಳಿಸಿಕೊಂಡರೆ ಮರುಕ್ಷಣವೇ ನಶಿಸಿಹೋಗುತ್ತೀ'. ದೇಹದ ಐಷಾರಾಮಗಳನ್ನು ಅರಸಿ ಹೋದರೆ, ದೈಹಿಕ ಸುಖಲೋಲುಪ್ತತೆಗಳಲ್ಲಿ ಸಮಯ ವ್ಯರ್ಥ ಮಾಡಿದರೆ ಮನುಷ್ಯನ ಉದ್ಧಾರವಾಗದು. ಅರ್ಥಾತ್ ನಿಷ್ಕ್ರಿಯತೆಯೇ ಮರಣ, ಕ್ರಿಯಾಶೀಲತೆಯೇ ಬದುಕು. ಉದಾಹರಣೆಗೆ ನಿಂತ ಕೊಳದ ನೀರು ಮತ್ತು ಹರಿಯುವ ಝರಿ. ಹರಿಯುವ ನದಿಯ ಸ್ಫಟಿಕ ಶುದ್ಧ ನೀರು ಯಾವಾಗಲೂ ತಾಜಾ, ನಿರ್ಮಲ, ಕುಡಿಯಲು ಸೂಕ್ತ ಮತ್ತು ಆಕರ್ಷಕ. ಅದೇ ನಿಂತ ನೀರು ಎಷ್ಟು ದುರ್ಗಂಧಪೂರಿತ, ಕಲ್ಮಷಪೂರ್ಣ, ಅಸಹ್ಯ! ಯಶಸ್ವಿಯಾಗಬಯಸುವವರು ಕ್ರಿಯೆಯ ಹಾದಿ ಹಿಡಿಯಬೇಕು. ನದಿಯ ಅವಿರತ ಹರಿವಿನಂತೆ. ವ್ಯಯವಾಗದಂತೆ ತನ್ನ ಬತ್ತಿ ಮತ್ತು ಎಣ್ಣೆಯನ್ನು ರಕ್ಷಿಸಿಕೊಳ್ಳುವವನು ಏನನ್ನೂ ಸಾಧಿಸಲಾರ. ಸದಾ ಮುನ್ನಡೆಯಬಯಸುವವನು ಎಲ್ಲವನ್ನೂ ಒಳಗೊಳ್ಳುವ, ತನ್ನ ಪಾತ್ರಕ್ಕೆ–ಪರಿಸರಕ್ಕೆ ಸರಿಯಾಗಿ ಹೊಂದಿಕೊಳ್ಳುವ, ಕ್ರಿಯಾತ್ಮಕವಾಗಿರುವ ನದಿಯ ಧೋರಣೆ ಅನುಸರಿಸುವುದು ಉತ್ತಮ. ಕ್ರಿಯೆ, ನಿರಂತರ ಕ್ರಿಯಾಶೀಲತೆಯೇ ಯಶಸ್ಸಿನ ಮೊದಲ ಸೂತ್ರ.

ಒಳ್ಳೆಯದರಿಂದ ಉತ್ತಮಕ್ಕೆ
ಸ್ವಯಂ ಮೀರಿಸುತಾ ಅನುದಿನ

ಈ ಸೂತ್ರ ಅವಲಂಬಿಸಿ ಕೆಲಸ ಮಾಡಿದರೆ "ಸಣ್ಣವರಾಗುವಷ್ಟೇ ಸುಲಭ ದೊಡ್ಡವರಾಗುವುದೂ" ಎಂಬುದು ಅರಿವಾಗುತ್ತದೆ.

## ಸ್ವ–ಮರೆವು

ನಮ್ಮ ಕಿರು ವ್ಯಕ್ತಿತ್ವವನ್ನು ಮರೆತು ಕೆಲಸದಲ್ಲಿ ಸಂಪೂರ್ಣವಾಗಿ ತೊಡಗಿಕೊಂಡರೆ ಯಶಸ್ಸು ನಿಶ್ಚಿತ. ಚಿಂತನೆ ನಡೆಸುತ್ತಾ ಚಿಂತನೆಯೇ ಆಗಿಬಿಟ್ಟರೆ, ಯಶಸ್ಸು ನಿಶ್ಚಿತ. ಕೆಲಸ ಮಾಡುತ್ತಾ ಕ್ರಿಯೆಯೇ ಆಗಿಬಿಟ್ಟರೆ ಯಶಸ್ಸು ಸಿಗದಿರದು.

ನಾನು ಎಂದು ಮುಕ್ತನಾಗುತ್ತೇನೆ?
'ನಾನು' ಇಲ್ಲವಾದಾಗ

ಬೇರೆ ಯಾವುದರಿಂದಲೂ ಇದು ಸಾಧ್ಯವಿಲ್ಲ. 'ಸಾಧ್ಯವಿಲ್ಲ' ಎನ್ನುತ್ತೇನೆ. ಯಶ ಸಾಧಿಸುವ ಮುನ್ನ ಯಶಸ್ಸಿನ ಹಂಬಲ ಕೆಲಸದಲ್ಲಿ ಲೀನವಾಗಿ ನಗಣ್ಯವಾಗಿ ಹೋಗಬೇಕು.

## ಪ್ರಸನ್ನಚಿತ್ತ

ಕೆಲಸದ ಫಲದ ಬಗ್ಗೆ ಆತಂಕ ಬೇಡ. ಭವಿಷ್ಯದ ಚಿಂತೆ ಅಥವಾ ಗೆಲುವು ಸೋಲುಗಳ ಹಂಗು ತೊರೆದು ಕಾಯಕಕ್ಕಾಗಿ ಕಾಯಕ ಮಾಡಬೇಕು. ಕ್ರಿಯೆಗೆ ಕ್ರಿಯೆಯೇ ಪ್ರತಿಫಲ. ಗತದ ಕುರಿತು ವ್ಯಥೆಪಡದೆ ಭವಿಷ್ಯದ ಬಗ್ಗೆ ಆತಂಕ ತಾಳದೆ ಜೀವಂತ ವರ್ತಮಾನದಲ್ಲಿ ದುಡಿಯಬೇಕು. ಈ ಚೈತನ್ಯ ಎಲ್ಲ ಸಂದರ್ಭಗಳಲ್ಲೂ ನಮ್ಮಲ್ಲಿ ಹುರುಪನ್ನು ಹಸಿರಾಗಿಟ್ಟಿರುತ್ತದೆ. ಜೀವಂತ ಬೀಜವಿದ್ದೆಡೆ ಗಾಳಿ, ನೀರು, ಮಣ್ಣು ಮತ್ತಿತರ ಅಗತ್ಯ ವಸ್ತುಗಳು ಆಕರ್ಷಿತಗೊಂಡು ಅದರ ಬೆಳವಣಿಗೆಗೆ ಸಹಾಯವಾಗುತ್ತದೆ ಎಂಬುದು ಪ್ರಕೃತಿಯ ಅನುಲ್ಲಂಘಿತ ನಿಯಮ. ಅಂತೆಯೇ ಉತ್ಸಾಹೀ, ಹುರುಪಿನ ಕೆಲಸಗಾರನಿಗೆ ಪ್ರಕೃತಿ ಸಕಲ ಸಹಾಯವನ್ನೂ ಒದಗಿಸುತ್ತದೆ. 'ನಮ್ಮಲ್ಲಿರುವ ಶಕ್ತಿಯ ಶ್ರದ್ಧಾಪೂರ್ಣ ಬಳಕೆಯೇ ಹೆಚ್ಚಿನ ಬೆಳಕಿಗೆ ದಾರಿ'.

ಯಶಸ್ಸಿಗೆ ಬೆನ್ನು ತೋರಿದ ಕ್ಷಣ, ಪರಿಣಾಮದ ಕುರಿತು ಚಿಂತಿಸುವುದನ್ನು ನಿಲ್ಲಿಸಿದ ಕ್ಷಣ, ಪ್ರಸ್ತುತ ಕರ್ತವ್ಯದ ಕಡೆಗೆ ಶಕ್ತಿಯನ್ನು ಕೇಂದ್ರೀಕರಿಸಿದ ಕ್ಷಣ ಯಶ ನಿಮ್ಮದಾಗುತ್ತದೆ, ನಿಮ್ಮನ್ನರಸಿ ಬರುತ್ತದೆ. ಹಾಗಾಗಿ ಗೆಲುವನ್ನು ಬೆಂಬತ್ತಿ ಹೋಗುವ ಅಗತ್ಯವಿಲ್ಲ. ಗೆಲುವು ನಿಮ್ಮ ಗುರಿಯಾಗದಿರಲಿ. ಆಗಲೇ, ಆಗ ಮಾತ್ರ, ಯಶಸ್ಸು ತಾನಾಗಿ ನಿಮ್ಮನ್ನೊಲಿದು ಬರುತ್ತದೆ.

## ಸ್ವಾವಲಂಬನೆ

ಕಡೆಯ, ಆದರೆ ಕಡೆಗಣಿಸಬಾರದ ಬಹುಮುಖ್ಯಸೂತ್ರ ಮತ್ತು ಯಶಸ್ಸಿನ ಪ್ರಧಾನ ಅಂಶವೆಂದರೆ ಸ್ವಾವಲಂಬನೆ. ನನ್ನಲ್ಲಿ ಯಾರಾದರೂ ನನ್ನ ಬದುಕಿನ ತತ್ವವನ್ನು ಒಂದೇ ಶಬ್ದದಲ್ಲಿ ಕೇಳಿದರೆ ನಾನು 'ಸ್ವಾವಲಂಬನೆ' ಎಂದೇ ಹೇಳಿಯೇನು. ಕೇಳು ಮನುಜಾ, ನಿನ್ನನ್ನು ಅರಿತುಕೋ! ನಿನಗೆ ನೀನು ಸಹಾಯ ಮಾಡಿಕೊಂಡಾಗ



ದೈವಸಹಾಯ ಒದಗಿ ಬಂದೇಬರುತ್ತದೆ ಎಂಬುದು ಅಕ್ಷರಶಃ ನಿಜ. ಸ್ವರ್ಗದಿಂದ ನೆರವು ಖಂಡಿತಾ ಒದಗುತ್ತದೆ. ಆತ್ಮವು ಸೀಮಾತೀತ. ಅದೇ ಸರ್ವಶಕ್ತ ದೇವರು ಎಂಬುದನ್ನು ಅರಿತುಕೊಳ್ಳಬಹುದು. ಸಿದ್ಧಪಡಿಸಬಹುದು. ಪ್ರಯೋಗದಿಂದ ಪರೀಕ್ಷಿಸಿ ತಿಳಿದುಕೊಳ್ಳಬಹುದಾದ ಸತ್ಯವಿದು. ನಿಸ್ಸಂಶಯವಾಗಿಯೂ ಸ್ವಾವಲಂಬನೆಯಿಂದ ಏನನ್ನು ಸಾಧಿಸಲು ಸಾಧ್ಯ ಅಸಾಧ್ಯವೆಂಬುದು ಸ್ವಾವಲಂಬನೆಯ ದಾರಿ ಹಿಡಿದರೆ ದುಡಿಮೆಯೇ ಗೊತ್ತಿಲ್ಲದವನೂ ಕೂಡ ಪ್ರಪಂಚದ ಅತಿ ದೊಡ್ಡ ಕ್ರಿಯಾಶೀಲ ವ್ಯಕ್ತಿಯಾಗಬಹುದು!

ಕೆಲವೊಮ್ಮೆ ನೀವು ಶ್ರಮಪಡಲು ಬಯಸದಿದ್ದಾಗಲೂ ಅತ್ಯುತ್ತಮ ಕೆಲಸ ನಿಮ್ಮಿಂದ ಸಂಪನ್ನಗೊಂಡುದು ಅನುಭವಕ್ಕೆ ಬಂದಿಲ್ಲವೇ? ನಿಮ್ಮ ಕ್ರಿಯಾಶಕ್ತಿಯನ್ನು ನಿಯಂತ್ರಿಸುವ ಯಾವುದೋ ಉನ್ನತ ಶಕ್ತಿ ಇದೆ ಎಂಬುದನ್ನು ನೀವು ಗಮನಿಸಿಲ್ಲವೇ? ಎಷ್ಟೋ ಬಾರಿ ಮನುಷ್ಯ ಮುಂಜಾನೆ ಎದ್ದು ಅನಿರ್ವಚನೀಯವಾದೊಂದು ಮಾನಸಿಕ ಸ್ಥಿತಿಯಲ್ಲಿ ಪ್ರಕೃತಿಯೊಂದಿಗೆ ಏಕತ್ರಗೊಂಡು ಲೇಖನಿ ಕೈಗೆತ್ತಿಕೊಂಡಾಗ ಅದರಿಂದ ಅದ್ಭುತ ಕಾವ್ಯವೋ ತತ್ವಶಾಸ್ತ್ರವೋ ಹರಿದು ಬಂದದ್ದಿದೆ. ಕಲಾವಿದನೊಬ್ಬ ಕುಂಚ ಹಿಡಿದು ಸುಂದರ ಚಿತ್ರವೊಂದನ್ನು ಬರೆಯಲು ಹರ ಸಾಹಸ ಮಾಡಿ ಸೋತದ್ದಿದೆ. ಅದೇ ಕಲಾವಿದ ಯಾವುದೋ ಒಂದು ಮುಂಜಾವಿನಲ್ಲಿ ಸ್ಫೂರ್ತಿಗೊಳಗಾದವನಂತೆ ಅಪ್ರತಿಮ ಚಿತ್ರಗಳನ್ನು ಬರೆದ ಉದಾಹರಣೆಗಳೂ ಇವೆಯಷ್ಟೇ?

ಹೀಗೆ ನಮ್ಮ ಕ್ರಿಯಾಶಕ್ತಿಗಳನ್ನು ಶ್ರೇಷ್ಠತೆಗೊಯ್ಯುವ ಯಾವುದೋ ಉಚ್ಚ ಶಕ್ತಿಯನ್ನು ನಾವು ಮನಗಾಣುತ್ತೇವೆ. ಒಮ್ಮೊಮ್ಮೆ ಇದ್ದಕ್ಕಿದ್ದಂತೆ ಒದಗುವ ಉನ್ನತ ಮನಃಸ್ಥಿತಿಗೆ ಆಗಾಗ ನಮ್ಮನ್ನು ಒಡ್ಡಿಕೊಳ್ಳುತ್ತಿದ್ದರೆ ಸದಾ ಅತ್ಯುತ್ತಮವಾದುದನ್ನು ಮಾಡುತ್ತಾ ಕೈಗೊಂಡ ಕೆಲಸಗಳನ್ನೆಲ್ಲ ಸಂಪೂರ್ಣವಾಗಿ ಸುಂದರವಾಗಿ ಪೂರೈಸಬಹುದು. ಆ ಉನ್ನತ ಮನಸ್ಥಿತಿಯನ್ನು ತಲುಪಲು ಬ್ರಹ್ಮಾಂಡದೊಂದಿಗೆ ಸಂಪೂರ್ಣ ಸಾಮರಸ್ಯದಿಂದಿರುವುದು, ದೈವದೊಂದಿಗೆ ಸತ್ಯದಿಂದಿರುವುದು ನಮ್ಮೊಳಗಿನ ಆತ್ಮ ಅಥವಾ ದೈವದೊಂದಿಗೆ ಒಂದಾಗಿ ಬದುಕುವುದು, ಅಹಮ್ಮಿನ, ಸ್ವಾರ್ಥ ಲಾಲಸೆಗಳ ಸ್ತರದಿಂದ ಮೇಲೇರುವುದು ಮುಂತಾದ ಮಾರ್ಗಗಳನ್ನು ವೇದಾಂತ ನಮ್ಮ ಮುಂದಿಡುತ್ತದೆ. ಹೀಗೆ ನಮ್ಮೊಳಗಿನ ಬೆಳಕು, ಶಕ್ತಿಗಳ ಸಹಾಯದಿಂದ ಕಾಯಕವೆಂಬುದು ವಿಸ್ಮಯಕಾರಿಯಾಗಲು ಸಾಧ್ಯ.

ನಮ್ಮ ಅಂತರಾತ್ಮದ ಶಾಂತಿ ವೇದಾಂತದ ಕಾಳಜಿ. ಅಂತರಾತ್ಮ ಸಂಪೂರ್ಣ ನೆಮ್ಮದಿಯಿಂದಿದ್ದು ದೇಹ ಅವಿರತ ದುಡಿಮೆಯಲ್ಲಿ ತೊಡಗಿರಬೇಕು. ದೇಹ ಚಲನಶೀಲವಾಗಿದ್ದು ಆತ್ಮ ನಿಶ್ಚಲ, ಶಾಂತವಾಗಿರಬೇಕು. ನಮ್ಮ ಸ್ವಾರ್ಥಪೂರ್ಣ ಚಡಪಡಿಕೆಯೇ ನಮ್ಮೆಲ್ಲ ಕೆಲಸಗಳು ಹಾಳಾಗಲು ಕಾರಣ.

ಹೀಗೆ ಕಾಯಕವೆಂಬುದು ನಿಸ್ವಾರ್ಥವಾಗಿದ್ದಷ್ಟೂ 'ನಾನು ಮಾಡುತ್ತಿದ್ದೇನೆ' ಎಂಬ ಭಾವವನ್ನು ಮೀರಿ, ನನ್ನದು ಎಂಬ ಹಕ್ಕಿನ ಹಂಗಿಲ್ಲದೆ ಲಾಭಾಪೇಕ್ಷೆಯ ಗಣನೆ ತೊರೆದು ಕ್ರಿಯೆಯಲ್ಲಿ ತೊಡಗಿದಷ್ಟೂ ಅಂತಹ ಕಾಯಕ ಅತ್ಯುನ್ನತ ಗುಣಮಟ್ಟದ್ದಾಗಿರುತ್ತದೆ.

### ಪ್ರೇಮ

ಯಶಸ್ಸಿಗೆ ಅತ್ಯಂತ ಮಹತ್ವದ ಸೂತ್ರಗಳೆಂದರೆ ಪ್ರೇಮ, ವಿಶ್ವದೊಂದಿಗೆ ಏಕಮತ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಕೊಳ್ಳುವಿಕೆ. ನಮ್ಮ ನೆರೆಯವರೊಂದಿಗೆ, ನಮ್ಮ ಸಂಪರ್ಕಕ್ಕೆ ಬರುವ ಪ್ರತಿಯೊಬ್ಬರೊಂದಿಗೂ ಸಮಾನತೆ, ಏಕತೆಯನ್ನು ಗುರುತಿಸಿಕೊಳ್ಳುವುದೇ ಪ್ರೀತಿ. ನೀವೊಬ್ಬ ವ್ಯಾಪಾರಿಯಾಗಿದ್ದಲ್ಲಿ, ಗಿರಾಕಿಗಳ ಮನಸ್ಸು ನಿಮ್ಮ ಮನಸ್ಸಿನಷ್ಟೇ ಸ್ಪಷ್ಟವಾಗಿ ಅರ್ಥವಾಗದಿದ್ದರೆ, ಏಳಿಗೆಯಾಗುವುದು ಕಷ್ಟ. ಕೆಲಸ ಕೆಡುತ್ತದೆ.

ಮನುಷ್ಯ ದೇಹದ ಇತರ ಸದಸ್ಯರಿಗಿಂತ ತಾನು ಭಿನ್ನವೆಂಬ ಸ್ವಾರ್ಥ ವಾದವನ್ನು ಹೂಡಿ ಕೈಯೇನಾದರೂ "ನೋಡಿಲ್ಲಿ, ನಾನು ಬಲಗೈ, ಎಲ್ಲ ಕೆಲಸಗಳನ್ನೂ ಮಾಡುತ್ತೇನೆ. ನನ್ನೀ ಪರಿಶ್ರಮದ ಫಲವನ್ನು ಇಡಿಯ ದೇಹ ಯಾಕೆ ಅನುಭವಿಸಬೇಕು? ನಾನು ಬೆವರು ಸುರಿಸಿ ದುಡಿದ ಆಹಾರವನ್ನು ಹೊಟ್ಟೆ ಮತ್ತಿತರ ಅಂಗಗಳಿಗೆ ನೀಡಬೇಕೆ? ಸಾಧ್ಯವಿಲ್ಲ. ಎಲ್ಲವನ್ನೂ ನಾನೇ ಸೇವಿಸುತ್ತೇನೆ" ಎಂದುಕೊಂಡರೆ ಈ ಸ್ವಾರ್ಥ ಯೋಚನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ಆಹಾರವನ್ನೆಲ್ಲಾ ಚರ್ಮದೊಳಗೆ ಹೊಗಿಸುವುದನ್ನು ಬಿಟ್ಟು ಅದು ಇನ್ನೇನನ್ನೂ ಮಾಡಲಾಗದು. ಆದರೆ ಇದು ಕೈಗೆ ಪ್ರಯೋಜನಕಾರಿಯೇ? ಈ ರೀತಿಯಲ್ಲಿ ಕೈಗೆ ಯಶಸ್ಸು ಸಿಗುವುದೇ? ಅಸಾಧ್ಯ! ಎಂದಿಗೂ ಇಲ್ಲ! ಹೀಗೆ ಮಾಡುವುದರಿಂದ ದೇಹದ ಇತರ ಸದಸ್ಯರಿಗೆ ಅಸೂಯೆಯಾಗುವಷ್ಟರ ಮಟ್ಟಿಗೆ ಕೈ ದಪ್ಪವಾಗಬಹುದು, ನಿಜ. ಹೀಗೆ ಬಲಿಷ್ಠವಾದ ಕೈ ಕಣಜದ ಹುಳುವನ್ನೋ, ಜೇನು ನೊಣವನ್ನೋ, ಹಾವನ್ನೋ ಹಿಡಿದುಕೊಳ್ಳಬಹುದು. ಹೀಗೆ ಕೈ ದಪ್ಪವಾಗಿ, ದೊಡ್ಡದಾಗಿ ಬೆಳೆಯಬಹುದು! ಹೀಗೆ ಮತ್ತು ಹೀಗೆ ಮಾತ್ರ ಕೈ ಸ್ವಾರ್ಥ ತೃಪ್ತವಾಗಲು ಸಾಧ್ಯ. ಆದರೆ ಇದು ಎಷ್ಟು ಅನಪೇಕ್ಷಿತ! ನಾವು ಇಂತಹ ತೃಪ್ತಿ ಅಥವಾ ಯಶಸ್ಸನ್ನು ಬಯಸುವುದಿಲ್ಲ. ಏಕೆಂದರೆ ಅದೊಂದು ವ್ಯಾಧಿಯಂತಿರುತ್ತದೆ.

ಇದೇ ತೆರದಲ್ಲಿ ಇಡೀ ಜಗತ್ತು ಒಂದೇ ದೇಹವಿದ್ದಂತೆ. ನಮ್ಮ ದೇಹದ ಭಾಗವಾಗಿರುವ ಕೈ, ಅಥವಾ ಬೆರಳು ಅಥವಾ ಉಗುರು, ಇನ್ನಾವುದೇ ಅಂಗದಂತೆಯೇ ಒಟ್ಟಾರೆ ದೇಹವೂ. ಯಶಸ್ಸು ಬಯಸುವವರು ಯಾವತ್ತೂ



ತಾನು ಇಡಿಯ ಪ್ರಪಂಚದಿಂದ ಬೇರೆ ಅಥವಾ ಭಿನ್ನ ಅಂದುಕೊಳ್ಳಬಾರದು. ತಾನು ಬೆಳೆಯಬೇಕಾದರೆ ಇಡೀ ದೇಹದ ಬೆಳವಣಿಗೆ ಅಗತ್ಯ ಎಂಬುದನ್ನು ಕೈ ಅರ್ಥಮಾಡಿಕೊಳ್ಳಬೇಕು. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ ಕೈಯೆಂದರೆ ಬರೀ ಮಣಿಕಟ್ಟಿನ ಮೇಲು ಭಾಗದಲ್ಲಿ ಇರುವ ಅಂಗವಷ್ಟೇ ಅಲ್ಲದೆ ಇಡೀ ದೇಹದೊಳಗಿನ ಆತ್ಮದೊಂದಿಗೆ ತಾನೂ ಒಂದಾಗಿರುವ ಭಾವನೆ ಅದಕ್ಕಿರಬೇಕು. ದೇಹದ ಆತ್ಮನಿಗೆ ನೀಡುವ ಆಹಾರ ಕೈಯ ಆತ್ಮನಿಗೂ ನೀಡಿದಂತೆ. ನಾನು ಮತ್ತು ದೇವರು ಈ ವಿಶ್ವದಲ್ಲಿ ಲೀನರಾಗಿದ್ದೇವೆ, ನಾನೂ ದೇವರೂ ಒಂದೇ ಎಂಬ ಸತ್ಯ ಅರ್ಥವಾಗಿ ಅದರಂತೆ ಬದುಕದಿದ್ದರೆ ಯಶಸ್ಸು ಸಿಗಲಾರದು. ವಿಂಗಡನೆ ಮತ್ತು ವರ್ಗೀಕರಣದ ಕೆಸರಲ್ಲಿ ಹೂತುಹೋಗಿ ಮನಸ್ಸು ನಿಂತ ನೀರಂತಾದರೆ ಸೌಖ್ಯರಹಿತರಾಗುತ್ತೇವೆ. ನಾವು 'ಪರಿಪೂರ್ಣ' ಮತ್ತು 'ಸಕಲ' ಎಂದುಕೊಂಡಾಗ ನಾವು ನಿಜಕ್ಕೂ ಅದೇ ಆಗುತ್ತೇವೆ. ಈ ಏಕಭಾವದ ಅನುಭವದಲ್ಲಿ ನಾವು ವೇದಾಂತವನ್ನು ಬದುಕುತ್ತಿರುತ್ತೇವೆ. ಈ ದಿವ್ಯ ಉನ್ನತ ಸತ್ಯವನ್ನು ಅತಿಕ್ರಮಿಸಿದಲ್ಲಿ, ಈ ಪವಿತ್ರ ನಿಯಮವನ್ನು ಉಲ್ಲಂಘಿಸಿದಲ್ಲಿ ಈ ಬಗೆಯ ಅಗೌರವಕ್ಕಾಗಿ ಮೂರ್ಖ, ಸ್ವಾರ್ಥಿ ಕೈಯಂತೆ ಯಾತನೆಪಡಬೇಕಾಗುತ್ತದೆ.

ಈ ಸತ್ಯವನ್ನು ಕವಿ ಕೋಲರಿಜ್ ತನ್ನ 'ಏನ್‌ಷಂಟ್ ಮಾರಿನರ್'ನಲ್ಲಿ ಬಹಳ ಸೊಗಸಾಗಿ ಮೂಡಿಸಿದ್ದಾನೆ. 'ಪ್ರಿಸನರ್ ಆಫ್ ಚಿಲನ್'ನಲ್ಲಿ ಬೈರನ್ ಕೂಡಾ ಇದನ್ನೇ ಹೊಳೆಸುತ್ತಾನೆ. ಯಾವಾಗೆಲ್ಲಾ ಮನುಷ್ಯ ಸುತ್ತಣ ಪ್ರಕೃತಿಯೊಂದಿಗೆ ಸಾಮರಸ್ಯ ಕಳೆದುಕೊಳ್ಳುತ್ತಾನೋ ಆಗೆಲ್ಲಾ ಹಾನಿಗೊಳಗಾಗುತ್ತಾನೆ; ಸಹ ಜೀವಿಗಳೊಂದಿಗೆ ಐಕಮತ್ಯ ಕಂಡುಕೊಂಡೊಡನೆ ಸಕಲ ಸಮೃದ್ಧಿ ಹೊಂದುತ್ತಾನೆ ಎಂಬುದನ್ನು ಈ ಮೇಲಿನ ಕವಿತೆಗಳು ಸಾಬೀತುಪಡಿಸಿವೆ.

'ಪ್ರೀತಿಯಲ್ಲಿ ನಿಸ್ಸೀಮನು ಪ್ರಾರ್ಥನೆಯಲ್ಲಿಯೂ ನಿಸ್ಸೀಮ
ಮನುಜ, ಖಗ, ಮೃಗ
ಚಿಕ್ಕ, ದೊಡ್ಡ, ಸರ್ವವನ್ನೂ
ಪ್ರೀತಿಸಬಲ್ಲವನು ಪ್ರಾರ್ಥಿಸಬಲ್ಲ.'

* * * *

# ೨. ಗಣಿತಶಾಸ್ತ್ರದ ಉಪಯೋಗಗಳು

ಗಣಿತಶಾಸ್ತ್ರಕ್ಕೆ ದೇಶ ಭಾಷೆಯಲ್ಲಿ 'ರಿಯಾಜ಼ಿ' ಎನ್ನುತ್ತಾರೆ. ಹೆಸರೇ ಸೂಚಿಸುವಂತೆ ಇದು 'ರಿಯಾಜ಼ತ್' ಅಥವಾ 'ಶಿಸ್ತಿ'ಗೆ ಸಂಬಂಧಿಸಿದ್ದು. ಗಣಿತಶಾಸ್ತ್ರದ ಅಧ್ಯಯನದಲ್ಲಿ ವಿಷಯ ಸಾಮರ್ಥ್ಯವನ್ನು ಬಲಪಡಿಸುವ ಮನೋ ಕಸರತ್ತುಗಳಿರುತ್ತವೆ.

ದೈಹಿಕ ವ್ಯಾಯಾಮದ ಪ್ರಯೋಜನಗಳು ಒಬ್ಬ ಸಾಮಾನ್ಯ ಭಾರತೀಯ ಬಾಲಕನ ಮನಸ್ಸಿಗೆ ಗೋಚರಿಸುವುದಿಲ್ಲ. ದೈಹಿಕ ಕಸರತ್ತಿನಿಂದ ತಿನಿಸುಗಳನ್ನು ಹೆಚ್ಚು ಆಸ್ವಾದಿಸಿ ಚೆನ್ನಾಗಿ ಜೀರ್ಣಿಸಿಕೊಳ್ಳಬಹುದೆಂಬ ಸತ್ಯ ಅರಿಯದ್ದರಿಂದ ಆತನಿಗೆ ವ್ಯಾಯಾಮ ತಿಂಡಿ ತಿನಿಸುಗಳಷ್ಟು ಪ್ರಿಯವೆನಿಸುವುದಿಲ್ಲ. ಇದೇ ತೆರದಲ್ಲಿ ಒಬ್ಬ ಸಾಮಾನ್ಯ ಭಾರತೀಯ ವಿದ್ಯಾರ್ಥಿಗೆ ಗಣಿತಶಾಸ್ತ್ರದಲ್ಲಿರುವ ಬುದ್ಧಿಯ ಕಸರತ್ತುಗಳ ಗುಣ ಪ್ರಯೋಜನಗಳು ಗೋಚರಿಸದಿರುವುದರಿಂದ ಆತ ಒಲ್ಲದ ಮನಸ್ಸಿನಿಂದ ಅದನ್ನು ಅಭ್ಯಸಿಸುತ್ತಾನೆ. ಗಣಿತ ಶಾಸ್ತ್ರವನ್ನು ಹೆಚ್ಚು ಹೆಚ್ಚು ಅಭ್ಯಾಸ ಮಾಡಿದಷ್ಟೂ ಇತರ ವಿಷಯಗಳನ್ನು ಆನಂದಿಸುತ್ತಾ ಪರಿಣತಿ ಹೊಂದಲು ಸಾಧ್ಯವೆಂಬುದನ್ನು ಆತ ತಿಳಿಯನು. ಈಗಾಗಲೇ ದೈಹಿಕವಾಗಿ ಬಲಾಢ್ಯರಾಗಿರುವವರಿದ್ದಾರೆ. ಆದರೆ ವ್ಯಾಯಾಮ ಅವರನ್ನು ಮತ್ತಷ್ಟು ಸದೃಢರನ್ನಾಗಿಸುತ್ತದೆ. ಅಂತೆಯೇ ಬೌದ್ಧಿಕವಾಗಿ ಸಮರ್ಥರಾಗಿರುವವರು ಹಲವರಿದ್ದಾರೆ. ಗಣಿತಶಾಸ್ತ್ರದ ಅಭ್ಯಾಸದಿಂದ ಅವರ ಬೌದ್ಧಿಕತೆಗೆ ಮತ್ತಷ್ಟ ಕಸುವು ಬರುತ್ತದೆ.

ಗಣಿತಶಾಸ್ತ್ರದ ಅಧ್ಯಯನ ಮನುಷ್ಯನ ಮೇಧಾಶಕ್ತಿ ಮತ್ತು ಜ್ಞಾಪಕಶಕ್ತಿಯನ್ನು ವೃದ್ಧಿಸುತ್ತ ಇಂದ್ರಿಯ ಸೀಮಿತವಲ್ಲದ ರಕ್ತಗತ ನೆನಪಿನ ಶಕ್ತಿಯನ್ನು ಕೊಡುತ್ತದೆ. ಬುದ್ಧಿ ಮತ್ತು ಚಿಂತನಾ ಶಕ್ತಿಗಳ ಬಲದಿಂದ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯುವಾಡುವುದರಿಂದ ಬಾಯಿಪಾಠದ ಮೂಲಕ ಏನನ್ನಾದರೂ ಜ್ಞಾಪಕದಲ್ಲಿಟ್ಟುಕೊಳ್ಳುವ ಪರಿಪಾಠವನ್ನು ತಪ್ಪಿಸುತ್ತದೆ. ಪ್ರೊಫೆಸರ್ ಲೋಯಿಸೆಟ್‌ನಿಗೆ ಅಗಾಧ ಸಂಪತ್ತನ್ನು ತಂದುಕೊಟ್ಟ ಸ್ಮರಣ ಶಕ್ತಿಯನ್ನು ಗಣಿತ ಶಾಸ್ತ್ರದಿಂದ ಪಡೆಯಬಹುದು. ಯಾವುದನ್ನೂ ಒತ್ತಿ ತಲೆಗೆ ತುಂಬುವ ಕ್ರಮವೇ ಇಲ್ಲದ ಅಧ್ಯಯನವದು. ಗಣಿತ ಶಾಸ್ತ್ರವನ್ನು ತಲೆಗೆ ತುರುಕಲಾಗದು. ಅದರಿಂದ ಏನೇ ಕಲಿತರೂ ಜಾಣ್ಮೆಯಿಂದ ಗ್ರಹಿಸಿಕೊಳ್ಳಬೇಕು. ಆರಂಭದಲ್ಲಿ ಗಣಿತ ಶಾಸ್ತ್ರ ಒಣ ಎನಿಸುತ್ತದೆ, ರುಚಿಸುವುದಿಲ್ಲ. ನಿಜ. ಆದರೆ ಇದೇ ಕಾರಣಕ್ಕೆ ಅದನ್ನು ಆಸ್ಥೆ,



ಅಭಿರುಚಿಯಿಂದ ಕಲಿಯಬೇಕು ಎನ್ನುವುದು. ಹಾಗೆ ಮಾಡುವುದರಿಂದ ನಮ್ಮ ಸಂಕಲ್ಪಶಕ್ತಿ ಬಲವಾಗುತ್ತದೆ. ಹಕ್ಸ್‌ಲೇ ಹೇಳುತ್ತಾನೆ. 'ಪ್ರಾಯಶಃ ಎಲ್ಲಾ ಶಿಕ್ಷಣಗಳ ಅತ್ಯಮೂಲ್ಯ ಫಲಿತಾಂಶವೆಂದರೆ ಇಷ್ಟ ಇದೆಯೋ ಇಲ್ಲವೋ ಮಾಡಬೇಕಾದ ಕೆಲಸವನ್ನು ಸಮಯಕ್ಕೆ ಸರಿಯಾಗಿ ಮಾಡುವುದರಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು. ಇದು ಜೀವನದಲ್ಲಿ ಕಲಿಯಬೇಕಾದ ಮೊದಲ ಪಾಠ. ಬದುಕಿನಲ್ಲಿ ಎಷ್ಟೇ ಬೇಗ ಒಬ್ಬ ವ್ಯಕ್ತಿ ತನ್ನ ಶಿಕ್ಷಣ ಪ್ರಾರಂಭಿಸಿದ್ದರೂ, ಆತ ಸಂಪೂರ್ಣವಾಗಿ ಕಲಿಯಬೇಕಾದ, ಪ್ರಾಯಶಃ ಕಡೆಯ ಪಾಠವೂ ಇದೇ.'

ಗಣಿತಶಾಸ್ತ್ರದ ಅಮೂರ್ತತೆ ವಿದ್ಯಾರ್ಥಿಯನ್ನು ಏಕಾಗ್ರತೆಯ ಕಡೆಗೆ ಒಯ್ಯುತ್ತದೆ. ಚಿತ್ತ ಚಾಂಚಲ್ಯಕ್ಕೆ ಅತ್ಯುತ್ತಮ ಪರಿಹಾರವೆಂದರೆ ಗಣಿತ. ಬೇಕನ್ ಹೇಳುತ್ತಾನೆ, 'ಮನುಷ್ಯನ ಬುದ್ಧಿ ಅಲೆದಾಡುತ್ತಿದೆಯಾದರೆ ಆತ ಗಣಿತ ಶಾಸ್ತ್ರ ಅಭ್ಯಾಸ ಮಾಡಲಿ. ಏಕೆಂದರೆ ನಿರೂಪಿಸುವಾಗ, ಆತನ ಚಿತ್ತ ಅತ್ತಿತ್ತ ಹರಿದಾಡಿದರೆ, ಮತ್ತೆ ಮೊದಲಿನಿಂದ ಆರಂಭಿಸಬೇಕು.'

ಬೇರೆ ಯಾವ ಕಾರಣಕ್ಕಲ್ಲದ್ದಿದ್ದರೂ ಅದು ಬೆಳೆಸುವ ಏಕಾಗ್ರತೆ ಎಂಬ ಗುಣಕ್ಕಾಗಿಯಾದರೂ ನಾವು ಗಣಿತಶಾಸ್ತ್ರವನ್ನು ಗೌರವಿಸಬೇಕು. ಅನ್ಯಮನಸ್ಕನಾಗಿರುವ ಯಾವನೂ ಮಾನವ ಚಟುವಟಿಕೆಯ ಯಾವ ವಿಭಾಗದಲ್ಲೂ ತನ್ನ ಛಾಪು ಮೂಡಿಸಲಾರ. ದೃಢತೆ ಮತ್ತು ನಿರಂತರ ಪ್ರಯತ್ನವನ್ನು ಕಲಿಸುವುದಷ್ಟೇ ಅಲ್ಲದೇ ಕಾಯಕದ ಕುರಿತು ನಮ್ಮಲ್ಲಿ ಒಲವನ್ನು ಮೂಡಿಸುವ ಕೆಲಸವನ್ನು ಗಣಿತ ಶಾಸ್ತ್ರದ ಅಧ್ಯಯನ ಮಾಡುತ್ತದೆ. ಕ್ರಿಯಾಹೀನತೆಯ ಪರಮ ವಿರೋಧಿಗಳಾಗಿ ನಮ್ಮನ್ನು ಮಾರ್ಪಡಿಸಿ ಅಪಾರ ಹುಮ್ಮಸ್ಸು, ಶಕ್ತಿ ತುಂಬುತ್ತದೆ. ಎಂಜಿನು ನಿಲ್ಲಿಸಿಯಾದ ಮೇಲೂ ಬಹುದೂರ ಓಡುವ ರೈಲಿನಂತೆ. ದೀರ್ಘ ಮತ್ತು ಕಷ್ಟಕರ ಅಭ್ಯಾಸಕ್ಕೆ ಒತ್ತಾಯಪೂರ್ವಕವಾಗಿ ಒಗ್ಗಿಕೊಂಡ ಗಣಿತದ ವಿದ್ಯಾರ್ಥಿ ತನ್ನ ಮೇಲಿನ ಒತ್ತಡದ ಅವಧಿಯ ನಂತರವೂ ತನ್ನೊಳಗೆ ಕ್ರೋಡೀಕರಣಗೊಂಡ ದೃಢಚಿತ್ತ ಮತ್ತು ಉತ್ಸಾಹದಿಂದಾಗಿ ಶ್ರಮವಹಿಸಿ ಕೆಲಸ ಮಾಡುತ್ತಲೇ ಹೋಗುತ್ತಾನೆ. ದುರ್ದೈವವೆಂದರೆ, ದುಡುಕು ಸ್ವಭಾವದ ಯುವಜನರು ಗಣಿತ ಅಥವಾ ಇನ್ನಾವುದೇ ಅಧ್ಯಯನದ ಪ್ರೇರಣೆಯಿಂದ ಹೊರಬಂದು ಬದುಕತೊಡಗಿದೊಡನೆ ಇಂದ್ರಿಯ ಲಾಲಸೆಗಳಲ್ಲಿ ಮುಳುಗಿ ಒಂದೋ ಕ್ರಿಯಾಹೀನರಾಗುತ್ತಾರೆ ಅಥವಾ ಹಿಂದುಳಿದುಬಿಡುತ್ತಾರೆ.

ಗಣಿತಶಾಸ್ತ್ರ ಧರ್ಮಕ್ಕೆ ಒತ್ತಾಸೆಯಾಗಿ ನಿಲ್ಲುತ್ತದೆ, ನೈತಿಕತೆಯ ತಳಪಾಯವನ್ನು ಗಟ್ಟಿಗೊಳಿಸುತ್ತದೆ ಎಂದರೆ ಅಚ್ಚರಿ ಎನಿಸಬಹುದು. ಆಗಿಂದಾಗ್ಗೆ ನಮ್ಮನ್ನು ಅವಮಾನಕ್ಕೀಡುಮಾಡುತ್ತಾ, ನಮ್ಮ ಅಸಾಮರ್ಥ್ಯವನ್ನು ನಮಗೇ ತೋರುತ್ತಾ, ನಿವಾರಿಸಲಾಗದ್ದೆಂದು ಅನಿಸುವಂಥ ಕೆಲ ಸಂಗತಿಗಳನ್ನು ಆಗಾಗ್ಗೆ ನಮ್ಮ ಮುಂದಿಡುತ್ತಾ ನಮ್ಮನ್ನು ವಿನೀತರನ್ನಾಗಿಸುತ್ತದೆ. ಅಹಂಕಾರವನ್ನು

ಹೋಗಲಾಡಿಸುತ್ತದೆ. ಸ್ವಪ್ರತಿಷ್ಠೆಯನ್ನು ಭಂಜಿಸಿ ನಮ್ಮೊಳಗೆ ದೈವ ಸಂಕಲ್ಪದ ಕುರಿತು ಜಾಗೃತಿ ಮೂಡಿಸುತ್ತದೆ.

ಹಕ್ಸ್ಲೇಯ ಹೇಳಿಕೆಯಂತೆ, "ನಿಜವಾದ ವಿಜ್ಞಾನ" (ನಿಸ್ಸಂಶಯವಾಗಿ ಗಣಿತ ಶಾಸ್ತ್ರವೂ ಸೇರಿ) "ಮತ್ತು ನಿಜವಾದ ಧರ್ಮ ಎಂಬವು ಅವಳಿ ಸಹೋದರಿಯರಂತೆ. ಒಂದನ್ನು ಇನ್ನೊಂದರಿಂದ ಬೇರ್ಪಡಿಸುವುದೆಂದರೆ ಎರಡನ್ನೂ ಅವಸಾನಕ್ಕೆ ತಳ್ಳಿದಂತೆ." ತಾನು ಎಷ್ಟು ಧಾರ್ಮಿಕವಾಗಿರುತ್ತದೋ ಅಷ್ಟೇ ವೈಜ್ಞಾನಿಕವಾಗಿ ಬೆಳೆಯುತ್ತದೆ ವಿಜ್ಞಾನ. ಹಾಗೇ ತನ್ನ ವೈಜ್ಞಾನಿಕ ಆಳ ಮತ್ತು ದೃಢತೆಯ ಆಧಾರಕ್ಕೆ ಹೊಂದಿಕೊಂಡಂತೆ ಧರ್ಮ ಅಭಿವೃದ್ಧಿಸುತ್ತದೆ. ತತ್ವಜ್ಞಾನಿಗಳ ಚಿಂತನೆ, ಕ್ರಿಯೆಗಳು ಕೇವಲ ಬೌದ್ಧಿಕತೆಗಿಂತ ಹೆಚ್ಚಾಗಿ ಉನ್ನತ ಧಾರ್ಮಿಕತೆಯಿಂದ ಪ್ರೇರಿತವಾದ ಬೌದ್ಧಿಕತೆಯ ಫಲ. ಅವರ ತಾಳ್ಮೆ, ಪ್ರೀತಿ, ಏಕಮನಸ್ಕತೆ ಮತ್ತು ಸ್ವಾರ್ಥತ್ಯಾಗಕ್ಕೆ ಮಣಿದು ಸತ್ಯ ಅವರಿಗೆ ಗೋಚರಿಸಿತೇ ಹೊರತು ಕೇವಲ ತಾರ್ಕಿಕ ಸೂಕ್ಷ್ಮಬುದ್ಧಿಯಿಂದಲ್ಲ.

'ಶುದ್ಧ ಗಣಿತಶಾಸ್ತ್ರವನ್ನು' ಅದರ 'ಶುದ್ಧ' ಊಹನೆಯ ಗುಣದ ಆಧಾರದ ಮೇಲೆ ಅಲ್ಲಗಳೆದುಬಿಡಬೇಡಿ. ಪ್ರೊಫೆಸರ್ ಡಿ. ಮಾರ್ಗನ್ ಹೇಳುವಂತೆ, "ತನಗೆ ಯಾವುದು ಉತ್ತಮವೆಂದು ನಿರ್ಧರಿಸುವ ಮನುಷ್ಯನ ಶಕ್ತಿ ಸಂಪನ್ಮೂಲಗಳ ಅಭಿವೃದ್ಧಿಯಿಂದ ಬೇಕಾದ ಹೊಸತನ್ನು ಕಂಡುಕೊಳ್ಳುವ, ಅದನ್ನು ಬಳಸಿ ಸಂಪತ್ತು ಸುಖಗಳನ್ನು ಹೆಚ್ಚಿಸುವ ಗುಣ– ಇದು ಪ್ರಾಯಶಃ ಓದು ಬರಹ ಬಲ್ಲ ಸಮಾಜದ ಅತ್ಯಂತ ಕೆಳಸ್ತರದ ಜನರಿಂದ ಹಿಡಿದು ಎಲ್ಲರಲ್ಲೂ 'ಶುದ್ಧ ಊಹನೆ'ಯ ಕಡೆಗೆ ಒಲವಿಲ್ಲದಿದ್ದರೆ ಸಾಧ್ಯವಾಗಲಾರದು."

ಗಣಿತ ಶಾಸ್ತ್ರವೆಂದರೆ ಜ್ಞಾನ ಮತ್ತು ಅದರ ಫಲವಾಗಿ ಅಧಿಕಾರ–ಅತ್ಯಂತ ಭಾರದ್ದಾದರೂ ಅದೊಂದು ಆಯುಧ. ಆ ಆಯುಧವನ್ನು ಬಳಸಲು ತಿಳಿಯದಿದ್ದರೆ ಅದು ನಮ್ಮ ತಪ್ಪು. ಯಾಕೆಂದರೆ ಅದನ್ನು ನಾವು ಬಳಸಲಿಚ್ಛಿಸಿದರೆ ತಾಳ್ಮೆ ಮತ್ತು ಸತತ ಪ್ರಯತ್ನಗಳ ಮೂಲಕ ಬಳಸಬಹುದು. ಆದರೆ ಒಮ್ಮೆ ಈ ಅಧಿಕಾರವನ್ನು ಬಳಸಿದೆವೆಂದರೆ ಅದು ನಮ್ಮ ಕೈಯಲ್ಲಿ ಭಯಂಕರವೆನಿಸುತ್ತದೆ. ಗಣಿತಶಾಸ್ತ್ರದ ಜ್ಞಾನ ಒಂದು ತೋಟದಂತೆ. ನೀರು ಹಾಕಿ, ಶ್ರಮವಹಿಸಿ ಬೆಳೆಸಿದರಷ್ಟೇ ಉತ್ತಮ ಬೆಳೆ ಕಾಣಬಹುದು. ಮೇಲ್ನೋಟಕ್ಕೆ ಬಂಜರಿನಂತೆ ಕಾಣುವ ಈ ಭೂಮಿಯಲ್ಲಿ ಸಾಕಷ್ಟು ಮಂದಿ ಸಮೃದ್ಧ ಬೆಳೆ ಬೆಳೆದಿದ್ದಾರೆ.

ಒಂದೊಮ್ಮೆ ಗಣಿತಶಾಸ್ತ್ರದ ಅಧ್ಯಯನದಿಂದ ಯಾವ ಲಾಭವೂ ಆಗದೇ ಇದ್ದರೂ, ಅದಕ್ಕೆ ಬಳಸಿದ ಶ್ರಮ ವೃಥಾ ವ್ಯಯವಾಯಿತು ಎಂದು ತಿಳಿಯಬಾರದು. ಪ್ರಕೃತಿಯಲ್ಲಿ ಯಾವುದೂ ವ್ಯರ್ಥ ಅಥವಾ ಕಳೆದುಹೋಯಿತು ಎಂಬುದಿಲ್ಲ. ಆದ್ದರಿಂದ ಶ್ರಮವೂ ಅವಿನಾಶಿ, ಕಳೆದು. ಹೋಗಲಾರದ್ದು. ಸೂರ್ಯ, ಕೆರೆ,



ತೊರೆ, ಕೊಳಗಳನ್ನು ಬರಿದು ಮಾಡುತ್ತಾನೆ. ನೀರು ಪೋಲಾಯಿತು ಎಂದು ಕೊಳ್ಳುತ್ತೇವೆ. ಆದರೆ ಮಳೆಯ ರೂಪದಲ್ಲಿ ಮತ್ತೆ ಅದೇ ನೀರು ತುಂಬಿಕೊಳ್ಳುತ್ತದೆ. ಹೀಗೇ ಚಲನಾತ್ಮಕ ಶಕ್ತಿ ಸುಪ್ತ ಶಕ್ತಿಯಾಗಿ ಪರಿವರ್ತವಾಗುತ್ತದೆಯೇ ಹೊರತು ಕಳೆದುಹೋಗುವುದಿಲ್ಲ. ಕ್ಷೀಣವಾದಂತೆ ಕಾಣುತ್ತದೆ ಅಷ್ಟೆ. ಅದೇ ರೀತಿಯಲ್ಲಿ ದುಡಿಮೆ ಕೂಡಾ ವ್ಯರ್ಥವಾಗುವುದಿಲ್ಲ. ನಿಜವಾಗಿಯೂ ಇಲ್ಲ. ಅದು ಅನುಭವವಾಗಿ ಬದಲಾಗಿರುತ್ತದೆ. ಕೆಲವೊಮ್ಮೆ ಭವಿಷ್ಯದ ಉಪಯೋಗಕ್ಕಾಗಿ ಶೇಖರಗೊಂಡಿರುತ್ತದೆಯೇ ಹೊರತು ನಿರುಪಯುಕ್ತವಾಗುವುದಿಲ್ಲ.

ಕೊಲಂಬಸನ ಶ್ರಮ ನೀಡಬೇಕಾದ ಫಲಿತಾಂಶ ನೀಡದಿದ್ದರೂ ಕಳೆದಂತೂ ಹೋಗಲಿಲ್ಲ. ಅಂತೆಯೇ 'ಫಿಲೋಸೊಫರ್ಸ್ ಸ್ಟೋನ್'ನ ಹುಡುಕಾಟ ರಸಾಯನಶಾಸ್ತ್ರದ ಶೋಧನೆಗೆ ಸಹಾಯಕಾರಿಯಾಯಿತು. ಜ್ಯೋತಿಷಶಾಸ್ತ್ರದ ಅಧ್ಯಯನದ ಪ್ರಯತ್ನ ಖಗೋಳ ವಿಜ್ಞಾನದ ಮೇಲೆ ಬೆಳಕು ಚೆಲ್ಲಿತು. ಘನದ ಪ್ರತಿರೂಪ ಸೃಷ್ಟಿಸುವ, ಕೋನದ ಟ್ರೈಸೆಕ್ಷನ್ ಮಾಡುವ, ಗೋಲವನ್ನು ಇಮ್ಮಡಿಗೊಳಿಸುವ ರೇಖಾಗಣಿತಜ್ಞರ ನಿಷ್ಪ್ರಯೋಜಕ ಯತ್ನದಿಂದಾಗಿ 'ಕೋನಿಕ್ ಸೆಕ್ಷನ್' ಕಂಡುಹಿಡಿಯಲ್ಪಟ್ಟಿತು. ನಿರಂತರ ಚಲಿಸುವ ಯಂತ್ರವನ್ನು ತಯಾರಿಸುವ ನಿರುಪಯುಕ್ತ ಪ್ರಯತ್ನದಲ್ಲಿ ಗತಿಶಾಸ್ತ್ರ (Science of Dynamics) ದ ಗಣನೀಯ ಬೆಳವಣಿಗೆಯಾಯಿತು. ಪ್ರಖ್ಯಾತ ಜಾನ್ ಹಂಟರ್ ಜಿಂಕೆಯು ಕೊಂಬಿನ ಬೆಳವಣಿಗೆಯನ್ನು ಅಧ್ಯಯನ ಮಾಡುವುದರಲ್ಲಿ ತನ್ನ ಬಹುಪಾಲು ಸಮಯವನ್ನು ಕಳೆದ. ಹಲವರ ಪ್ರಕಾರ ಇದು ಸಮಯದ ಶುದ್ಧ ಪೋಲು. ಆದರೆ ಆತನ ಈ ನಿರುಪಯುಕ್ತ ಜ್ಞಾನದ ಸದ್ಬಳಕೆಯಿಂದ ಮರಣಶಯ್ಯೆಯಲ್ಲಿದ್ದ ಒಬ್ಬ ರೋಗಿಗೆ ನೆರವಾಯಿತು ಎಂಬ ಕಾರಣಕ್ಕೆ ಆತ ಅಜರಾಮರನಾದ. ಆತನ ಶ್ರಮ ಹಾಳಾಗಲಿಲ್ಲ. ಹಾಗೆಯೇ ಗಣಿತಶಾಸ್ತ್ರದ ಅಧ್ಯಯನದಲ್ಲಿ ನಡೆಸಿದ ಶ್ರಮವೂ ನಷ್ಟವಾಗದೆ ಬೇರೆ ಇನ್ಯಾವುದೋ ಉಪಯುಕ್ತ ಶಕ್ತಿಯ ಅಂಶವಾಗಿ ತನ್ನನ್ನು ತಾನೇ ಸೃಷ್ಟಿಸಿಕೊಳ್ಳುತ್ತದೆ.

ಹೆಲ್ಮ್ ಹೋಲ್ಟ್ಜನಂಥ ಪಂಡಿತನೇ ಹೇಳಿದಂತೆ, "ಜುಪಿಟರ್‌ನ ತಲೆಯಿಂದ ಉದ್ಭವಿಸಿದ ಸಶಸ್ತ್ರ ಮಿನೆರ್ವನಂತಿರುವ, ಶಂಕೆ ಮತ್ತು ಅಸ್ಥಿರತೆಗಳು ದನಿಯೆತ್ತಲಾರದಂತಹ ಮಾನವ ಅಧ್ಯಯನದ ಶಾಖೆ" ಯ ಬಗ್ಗೆ ಶ್ರಮ ವ್ಯಯದ ಮಾತನಾಡುವುದು ಅದನ್ನು ಅಗೌರವಿಸಿದಂತೆ.

ಭಾವಣಿಗೆ ತೂಗು ಹಾಕಿದ ದೀಪವೊಂದರ ಕಂಪನಗಳು ಮೊತ್ತ ಮೊದಲ ಬಾರಿಗೆ ಲೋಲಕ ಗಡಿಯಾರವನ್ನು ಮಾಡುವ ಬಗೆಯನ್ನು ಗೆಲಿಲಿಯೋಗೆ ಹೇಳಿಕೊಟ್ಟವು. ಬೀಳುತ್ತಿರುವ ಒಂದು ಸೇಬು ಸೌರ ಮಂಡಲದ ಗೂಢಗಳ ಕುರಿತು ನ್ಯೂಟನ್‌ಗೆ ಕಲಿಸಿತು. ಒಂದು ಕುದಿಯುವ ಕೆಟಲ್ ಜಾರ್ಜ್ ಸ್ಟೀವನ್‌ಸನ್‌ಗೆ ಉಗಿಬಂಡಿ ಮಾಡುವುದನ್ನು ಕಲಿಸಿತು. ವಿವಿಧ ಲೋಹಗಳ ಸಂಪರ್ಕದಲ್ಲಿ ಕಪ್ಪೆಯ

ಕಾಲೊಂದರ ಮಾಂಸಖಂಡಗಳ ಎಳೆತವನ್ನು ಕಂಡ ಗಾಲ್ವನಿ ಇಲೆಕ್ಟ್ರಿಕ್ – ಟೆಲಿಗ್ರಾಫ್‌ನ ಸಂಶೋಧನೆಗೆ ಕಾರಣನಾದ, ಕೆಲ ಮಹತ್ವದ ಕಾಣ್ಕೆಗಳತ್ತ ಸಾಗಿದ. ಹೀಗೆ ಮೇಲ್ನೋಟಕ್ಕೆ ಯಃಕಶ್ಚಿತ್ ಎಂಬಂತೆ ತೋರುವ ವಸ್ತುಗಳು ಇಂತಹ ಮಹತ್ತರ ಪಾಠಗಳನ್ನು ಕಲಿಸಿದರೆ, ಜ್ಞಾನವೂ ವಿಜ್ಞಾನವೂ ಆದ ಗಣಿತಶಾಸ್ತ್ರ ನಮಗೆ ಬಹಳಷ್ಟನ್ನು ಕಲಿಸಲು ಸಾಧ್ಯವಿಲ್ಲವೇ?

ಇತರರ ಶ್ರಮದ ಫಲವನ್ನು ನಾವು ಯಥೇಚ್ಛವಾಗಿ ಉಣ್ಣುತ್ತಿದ್ದೇವೆ. ಪ್ರಯಾಣಕ್ಕೆ ಬಹು ಸೂಕ್ತವೆನಿಸುವ ರೈಲಿನಲ್ಲಿ ಊರಿಂದೂರಿಗೆ ಹೋಗುತ್ತೇವೆ. ನಮಗಾಗಿ ಉತ್ಪಾದಿಸಲಾದ ವಿದ್ಯುಚ್ಛಕ್ತಿಯನ್ನು ನಮ್ಮ ದೊಡ್ಡ, ಸಣ್ಣ ಎಲ್ಲಾ ಕೆಲಸಗಳಿಗೂ ಬಳಸಿಕೊಳ್ಳುತ್ತೇವೆ. ಆರಾಮದ ಮನೆಗಳಲ್ಲಿ ವಾಸಿಸುತ್ತೇವೆ. ನಮ್ಮ ಅಳತೆ, ಇಷ್ಟಗಳಿಗೆ ತಕ್ಕಂತೆ ಕತ್ತರಿಸಿ ಹೊಲಿದ ಬಟ್ಟೆಗಳನ್ನು ತೊಡುತ್ತೇವೆ. ಆರೋಗ್ಯಕ್ಕೆ ಒಳ್ಳೆಯದು ಎನಿಸುವ ಆಹಾರವನ್ನು ತಯಾರಿಸಿ ತಿನ್ನುತ್ತೇವೆ. ಹೀಗೆ ನಮಗಾಗಿ ಇತರರು ಯೋಚಿಸಿ ಮಾಡಿದ ಹಲವನ್ನು ನಾವು ಸಂತೋಷದಿಂದ ಅನುಭವಿಸುತ್ತೇವೆ. ಇದೇ ರೀತಿಯಲ್ಲಿ ನಾವೂ ಇತರರಿಗೆ ಏನಾದರೂ ಒಳ್ಳೆಯದು ಮಾಡಬೇಕು ಎಂಬುದನ್ನು ಮರೆಯಬಾರದಲ್ಲ! ನಾವಿಲ್ಲಿಗೆ ಬಂದಾಗ ಇದ್ದದ್ದಕ್ಕಿಂತ ಉತ್ತಮ ಸ್ಥಿತಿಯಲ್ಲಿ ನಾವು ಈ ಜಗತ್ತನ್ನು ಬಿಟ್ಟು ಹೋಗಲು ಪ್ರಯತ್ನಿಸಬೇಕು. ಸಮಯದ ಉಸುಕಿನಲ್ಲಿ ನಮ್ಮ ಕೆಲವಾದರೂ ಹೆಜ್ಜೆಗಳನ್ನು ಮೂಡಿಸಿ ಹೋಗೋಣ. ವಿಜ್ಞಾನ ಮತ್ತು ಗಣಿತದ ಕಡಲಿನಾಳಕ್ಕೆ ಧುಮುಕಿ ಈ ಪ್ರಪಂಚವನ್ನು ಅಲಂಕರಿಸಬಲ್ಲಂತಹ ಕೆಲ ಮುತ್ತುಗಳನ್ನು ಆಯ್ದು ತರೋಣ.

ಇದಕ್ಕೆ ಬೇಕಾದದ್ದು ಕಾಯಕ, ಕಾಯಕ, ಕಾಯಕ. ಹೃತ್ಪೂರ್ವಕವಾಗಿ ಎಲ್ಲ ಶಕ್ತಿ ಕೂಡಿಸಿ ಕಾಯಕವೇ ಕೈಲಾಸವೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಪ್ರಾಮಾಣಿಕ ಕೆಲಸಕ್ಕೆ ಕೆಲಸವೇ ಪ್ರತಿಫಲ. ದುಡಿಮೆ, ಕಾಯಕ ಮನುಷ್ಯನ ಸಹಜ ಸ್ಥಿತಿ.

* * * *



## ೩. ಗಣಿತಶಾಸ್ತ್ರದ ಶಿಸ್ತುಗಳು

ಗಣಿತಶಾಸ್ತ್ರಕ್ಕೆ ರಾಜಮಾರ್ಗವೆಂಬುದಿಲ್ಲ. ಕವಿಗಳಂತೆ ಗಣಿತಶಾಸ್ತ್ರಜ್ಞರನ್ನು ಪರಿಚಯಿಸಲಾಗುವುದಿಲ್ಲ. ತಯಾರಿಸಲಾಗುವುದಿಲ್ಲ. ಅವರು ಹುಟ್ಟಿಬರುತ್ತಾರೆ. ಆದರೂ ಈ ಕೆಳಗಿನ ತತ್ವಗಳನ್ನು, ಎಚ್ಚರಿಕೆಗಳನ್ನು ತಪ್ಪದೇ ಪಾಲಿಸಿದರೆ ಹುಬ್ಬು ಗಂಟಿಕ್ಕಿದ, ಇಳಿಮುಖದ, ಜನರನ್ನು ಹಚ್ಚಿಕೊಳ್ಳದ ಶೀತಲ ವ್ಯಕ್ತಿತ್ವವೆಂಬ ಕಲ್ಪನೆಯಿಂದ ಭಿನ್ನವಾಗಿ ಗಣಿತ ಶಾಸ್ತ್ರಜ್ಞನೆಂದರೆ ಪ್ರೀತಿಸುವ, ಚೈತನ್ಯಪೂರ್ಣ ಒಲವಿನ ಗೆಳೆಯನಾಗಿ ಮಾರ್ಪಾಡಾಗುತ್ತಾನೆ.

೧. (ಅ) ಹೊಟ್ಟೆತುಂಬಾ ಉಂಡ ಒಡನೆಯೇ ಗಣಿತವನ್ನು ಕೈಗೆತ್ತಿಕೊಳ್ಳಕೂಡದು. ಆಹಾರ ಚೆನ್ನಾಗಿ ಪಚನವಾದ ಮೇಲೆ ಆ ವಿಷಯದ ಅಧ್ಯಯನದಲ್ಲಿ ತೊಡಗಬಹುದು. ಇಲ್ಲವಾದರೆ ಅದೊಂದು ನಿರಾಸಕ್ತಿ ಹುಟ್ಟಿಸುವ ಶುಷ್ಕ ಅಧ್ಯಯನವಾಗಿ ಪರಿಣಮಿಸುತ್ತದೆ.

(ಆ) ಗಣಿತದ ಕ್ಲಿಷ್ಟ ಸಮಸ್ಯೆಗಳನ್ನು ಬಿಡಿಸಬೇಕಾದ ದಿನಗಳಲ್ಲಿ ಸರಳ, ಜೀರ್ಣಕಾರಿ ಆಹಾರವನ್ನು ಸೇವಿಸಬೇಕು. ಆತ್ಮಸಂಯಮಿಯಾಗಿರಬೇಕು. ತುಪ್ಪವನ್ನು ಹೆಚ್ಚಾಗಿ ಸೇವಿಸಬಾರದು. ಉತ್ತಮ ಚಿಂತನೆ ಮತ್ತು ಸರಳ ಜೀವನ ಜೊತೆಯಾಗಿ ಸಾಗಬೇಕು.

೨. (ಅ) ನಿದ್ದೆಗಣ್ಣಿನಲ್ಲಿ ಅಥವಾ ಇನ್ನೇನು ಮಲಗಲು ತೆರಳಬೇಕು ಎನ್ನುವಾಗ ಗಣಿತದ ಕಷ್ಟಕರ ಸಮಸ್ಯೆಗಳ ಮೇಲೆ ಎರಗಿ ಬೀಳಬಾರದು. ಆ ಸ್ಥಿತಿಯಲ್ಲಿ ಅವು ಜಯಿಸಲಾಗದ, ಬಿಡಿಸಲಾಗದ ಸಮಸ್ಯೆಗಳಾಗಿ ಕಾಣುತ್ತವೆ. ಅವು ಪ್ರತಿರೋಧವನ್ನು ತೋರುವುವಲ್ಲದೆ, ನಮ್ಮನ್ನು ಸಂಪೂರ್ಣವಾಗಿ ಮಲಗಿಸಿಬಿಡುತ್ತವೆ. ಸರಳ ಮಾತಿನಲ್ಲಿ ಹೇಳುವುದಾದರೆ, ಒಂದು ಜಟಿಲ ಸಮಸ್ಯೆಯನ್ನು ಕೈಗೆತ್ತಿಕೊಂಡ ಎರಡು ಮೂರು ನಿಮಿಷಗಳೊಳಗೆ ಆಳ ನಿದ್ದೆ ಆವರಿಸುತ್ತದೆ. ಅಂತಹ ಸಮಯಗಳಲ್ಲಿ ಹೆಚ್ಚೇನೂ ತಲೆ ಉಪಯೋಗಿಸುವ ಅಗತ್ಯವಿಲ್ಲದ, ಈಗಾಗಲೇ ತಿಳಿದಿರುವ ಅಥವಾ ಸರಳ ಸಮಸ್ಯೆಗಳನ್ನು ಪುನರಾವಲೋಕನ ಮಾಡಿಕೊಳ್ಳುವುದು ಲಾಭದಾಯಕ.

(ಆ) ಗಣಿತಶಾಸ್ತ್ರದಲ್ಲಿ ಪರಿಣತಿ ಸಾಧಿಸಬೇಕಾದರೆ ನಿದ್ದೆಗೆ ಸಾಕಷ್ಟು ಪ್ರಾಮುಖ್ಯ ಕೊಡಬೇಕು. ತಕ್ಕಷ್ಟು ನಿದ್ದೆ ಮಾಡದವನು ಸ್ಪಷ್ಟತೆಯಿಂದ ಕೆಲಸ ಮಾಡಲಾರ.

ಪ್ರಸಿದ್ಧ ಗಣಿತಶಾಸ್ತ್ರಜ್ಞ ಡೆಕಾರ್ಟೆಯ ಸೂಕ್ಷ್ಮ ಆರೋಗ್ಯದ ಕಾರಣಕ್ಕಾಗಿ ಬೆಳಗ್ಗೆ ತಡವಾಗಿ ಏಳುವುದಕ್ಕೆ ಆತನಿಗೆ ಅನುಮತಿ ಇತ್ತಂತೆ. ಅದು ಆತನ ಎಂದಿನ ಕ್ರಮವಂತೆ. ೧೬೪೭ರಲ್ಲಿ ಆತ ಪಾಸ್ಕಲ್‌ನನ್ನು ಭೇಟಿಯಾದಾಗ ಈ ಕುರಿತು ಪ್ರಸ್ತಾಪಿಸುತ್ತಾ. ಗಣಿತಶಾಸ್ತ್ರದಲ್ಲಿ ಉತ್ತಮ ಕೆಲಸ ಮಾಡಲು ಮತ್ತು ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಲು ಇದ್ದ ಒಂದೇ ಮಾರ್ಗವೆಂದರೆ ಬೆಳಗ್ಗೆ ತನ್ನನ್ನು ಎಬ್ಬಿಸಲು ಯಾರನ್ನೂ ಬಿಡದೇ ತನಗೇ ಏಳಬೇಕೆಂದು ಅನಿಸುವವರೆಗೆ ಮಲಗುವುದು, ಎಂದು ಹೇಳಿದ್ದನಂತೆ.

೩. (ಅ) ಒಂದೊಮ್ಮೆ ಊಟವಾದೊಡನೆ ಅಥವಾ ಮಲಗುವ ಮುನ್ನ ಗಣಿತದ ಕಷ್ಟಕರ ಭಾಗಗಳನ್ನು ಅಭ್ಯಸಿಸುವ ಅಥವಾ ಜಟಿಲ ಸಮಸ್ಯೆಗಳನ್ನು ಪರಿಹರಿಸಲೇಬೇಕಾದ ಅನಿವಾರ್ಯ ಸಂದರ್ಭಗಳೂ ಬಂದಲ್ಲಿ ನಿಂತೇ ಕೆಲಸ ಮಾಡುವುದು, ಅತ್ತಿಂದಿತ್ತ ನಡೆಯುತ್ತಾ ಚಿಂತಿಸುವುದು ಒಳಿತು. ಇಲ್ಲವಾದಲ್ಲಿ ಸೋಮಾರಿತನ ಆವರಿಸಿ, ಕೆಲಸದ ಗುಣಮಟ್ಟ ಇಳಿಯುತ್ತದೆ.

(ಆ) ದೈಹಿಕ ವ್ಯಾಯಾಮವನ್ನು ಮರೆಯಲೇಕೂಡದು. ಇದರ ಉಪೇಕ್ಷೆಯೇ ಎಷ್ಟೋ ವಿದ್ಯಾರ್ಥಿಗಳ ಅವನತಿಗೆ ಕಾರಣ. ಕ್ರಮವಿಲ್ಲದ ವಿದ್ಯಾರ್ಥಿಗಳು ಸಮಯದ ಬಹುಭಾಗವನ್ನೆಲ್ಲಾ ಮೈಗಳ್ಳತನದಲ್ಲಿ ಕಳೆದು ಪರೀಕ್ಷೆ ಇನ್ನೇನು ಹತ್ತಿರವಿದೆ ಎನ್ನುವಾಗ ಮಿತಿಮೀರಿ ಕೆಲಸ ಮಾಡುತ್ತಾರೆ. ಯಾವುದೇ ದೈಹಿಕ ವ್ಯಾಯಾಮವಿಲ್ಲದ ಇವರಿಗೆ ಆರೋಗ್ಯದ ಸೂತ್ರಗಳೆಂದರೆ ಅವಜ್ಞೆ. ಹೀಗೆ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾರೋ ಇಲ್ಲವೋ ಆರೋಗ್ಯವನ್ನಂತು ಪೂರ್ತಿ ಹದಗೆಡಿಸಿಕೊಳ್ಳುತ್ತಾರೆ. ಯಾವುದು ನಿಜವಾಗಿ ಆಲಸ್ಯದಿಂದ ಬಂತೋ ಅದರ ಆರೋಪ ದುಡಿಮೆಯ ಮೇಲೆ ಶ್ರಮದ ಮೇಲೆ ಬರುತ್ತದೆ.

ನೆನಪಿರಲಿ, ವಿದ್ಯಾರ್ಥಿಯನ್ನು ಕೊಲ್ಲುವುದು ಶ್ರಮವಲ್ಲ, ಆಲಸ್ಯ ಅಥವಾ ವ್ಯಾಯಾಮದ ಕುರಿತು ಉಪೇಕ್ಷೆ. ಇಂಡಿಯಾಕ್ಕೆ ಕೆಲಸಗಾರರು ಬೇಕು, ಆದರೆ ಸೋಮಾರಿ ಕೆಲಸಗಾರರಲ್ಲ.

* * * *



## ೪. ವಿಶ್ರಾಂತಿ ಮತ್ತು ಆರಾಮ

ಬದುಕಿನ ಬಹುಮುಖೀ ಬೇಡಿಕೆಗಳು ನಡೆಸುವ ದೈಹಿಕ, ಮಾನಸಿಕ ಶಕ್ತಿಗಳ ವಿವಿಧ ಬಗೆಯ ಬಳಕೆಯಿಂದಾಗಿ ಮನುಷ್ಯ ಸದಾಕಾಲ ಒತ್ತಡದಲ್ಲಿದ್ದು, ಆತಂಕದ ಸ್ಥಿತಿಯಲ್ಲಿರುತ್ತಾನೆ. ಹೀಗೆ ಬಾಹ್ಯ ಸಂದರ್ಭಗಳು ನಮ್ಮನ್ನು ನಿಯಂತ್ರಿಸುತ್ತಿದ್ದರೆ ನಮ್ಮ ಸಾವಿಗೆ ನಾವೇ ಗುಳಿ ತೋಡಿಕೊಂಡಂತೆ. ಇದನ್ನು ತಡೆಯುವುದು ಹೇಗೆ?

ಕಾಯಕದಿಂದ ಜಾರಿಕೋ ಅಥವಾ ನಿತ್ಯದ ವೃತ್ತಿಗಳನ್ನು ತೊರೆದುಬಿಡು ಎಂಬ ಸಲಹೆಯನ್ನು ರಾಮ ನೀಡುವುದಿಲ್ಲ. ಆದರೆ ಬಳಲಿಸುವಂತಹ, ಮುಖ್ಯ, ಕಷ್ಟಕರ ಕೆಲಸಗಳೇನೇ ಇದ್ದರೂ ಮನಸ್ಸನ್ನು ಸದಾ ವಿಶ್ರಾಂತಿಯಲ್ಲಿಡುವ ಅಭ್ಯಾಸವನ್ನು ಬೆಳಸಿಕೊಳ್ಳಬೇಕು ಎಂಬ ಶಿಫಾರಸು ಮಾಡುತ್ತೇನೆ. ಇದಕ್ಕೂ ವೇದಾಂತದ ಉಪದೇಶವಾದ ವಿರಕ್ತಿಗೂ ಯಾವ ವ್ಯತ್ಯಾಸವೂ ಇಲ್ಲ.

ಸದಾ ಕಾಲ ವಿರಕ್ತಿಯ ಶಿಖರದ ಮೇಲೆ ನಿಂತು ಆ ಅನುಕೂಲಕರ ಸ್ಥಾನದಿಂದ ಖಚಿತ ನಿರ್ಧಾರಗಳನ್ನು ತೆಗೆದುಕೊಂಡು ಒದಗಿಬರುವ ಎಲ್ಲಾ ಕೆಲಸಗಳನ್ನು, ಕರ್ತವ್ಯಗಳನ್ನು ಸಮಾನವಾಗಿ ನಿಭಾಯಿಸಿದರೆ ದಣಿವು ಎಂಬುದು ಇರುವುದಿಲ್ಲ.

ಇನ್ನೂ ವಿವರಿಸಿ ಹೇಳುವುದಾದರೆ, ಕೆಲಸ ಮಾಡುವಾಗ ಸಿಗುವ ಅಲ್ಪ ವಿರಾಮದ ವೇಳೆಗಳಲ್ಲಿ, ಕೆಲ ಘಳಿಗೆ 'ಇರುವುದು ಒಂದೇ ಸತ್ಯ, ದೇವರು–ನಾನು' ಎಂಬ ಚಿಂತನೆಯಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳಬೇಕು. ಮತ್ತು ಈ ದೇಹ ಕೇವಲ ಸಾಕ್ಷಿ. ಪರಿಣಾಮ ಅಥವಾ ಪ್ರತಿಫಲ ನನಗೆ ಸಂಬಂಧಿಸಿದ್ದಲ್ಲ. ಹೀಗೆ ಧ್ಯಾನಿಸುತ್ತಾ, ಕಣ್ಣು ಮುಚ್ಚಿ, ಮಾಂಸಖಂಡಗಳನ್ನು ಸಡಿಲಿಸಿ, ದೇಹವನ್ನು ಹಗುರಗೊಳಿಸಿ ಮನಸ್ಸನ್ನು ಯೋಚನೆಗಳಿಂದ ಮುಕ್ತಗೊಳಿಸಬೇಕು. ಯೋಚನೆಗಳ ಹೊರೆಯನ್ನು ಎಷ್ಟೆಷ್ಟು ಹೆಗಲಿನಿಂದ ಇಳಿಸುತ್ತೇವೆಯೋ ಅಷ್ಟಷ್ಟು ಬಲ ನಮ್ಮೊಳಗೆ ಮೂಡುತ್ತದೆ.

ದೇಹದ ಚೈತನ್ಯವನ್ನು ನರಗಳು ಕಾಪಾಡುತ್ತವೆ. ಯೋಚನಾಶಕ್ತಿ ಕೂಡ ನರಮಂಡಲದಿಂದ ಪುಷ್ಟ ಪಡೆಯುತ್ತದೆ. ಜೀರ್ಣಕ್ರಿಯೆ, ರಕ್ತಸಂಚಾರ, ಕೂದಲಿನ ಬೆಳವಣಿಗೆ ಮುಂತಾದುವೆಲ್ಲವೂ ಅವಲಂಬಿಸಿರುವುದು ನರಮಂಡಲವನ್ನೇ. ಯೋಚನೆಗಳು ವಿವಿಧೆಡೆ ಹಂಚಿಹೋದಲ್ಲಿ, ಹಲವು ರೀತಿಯ ವಿಚಾರಗಳಿಂದ

ಮನಸ್ಸು ಗೊಂದಲಗೊಂಡು ಚಿಂತಿತವಾಗಿದ್ದರೆ ಅದು ನರಗಳ ಮೇಲೆ ಒತ್ತಡ ತರುತ್ತದೆ. ತ್ರಾಸದಾಯಕ ಚಿಂತನಾ ಪ್ರಯೋಗದ ಮೂಲಕ ನರಗಳು ಚಟುವಟಿಕೆಯಿಂದಿರುವುದು ಒಂದು ರೀತಿಯಲ್ಲಿ ಒಳಿತೇ ಆದರೂ ಅದರಿಂದ ಅಪಾಯವೇ ಹೆಚ್ಚು. ಅವಿಶ್ರಾಂತ ಚಿಂತನೆ ಮತ್ತು ಚಿಂತೆಗಳಿಂದ ದೇಹದ ಜೀವಾಧಾರ ಕ್ರಿಯೆಗಳೂ ಹಾನಿಗೊಳಗಾಗುತ್ತವೆ. ನಿಮ್ಮ ಜೀವ ಚೈತನ್ಯವನ್ನು, ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದರೆ, ಜೀವನದ ಭಾರವನ್ನು ನರಮಂಡಲವೆಂಬ ಕುದುರೆ ಸುಲಭವಾಗಿ ಹೊರಬೇಕಾದರೆ, ಅಹಮ್ಮಿನ ವಿಚಾರಗಳ ಹೊರೆಯನ್ನು ಕಡಿಮೆ ಮಾಡಿಕೊಳ್ಳಬೇಕು. ಆತಂಕಕಾರಿ ಯೋಚನೆಗಳು ಮತ್ತು ಚಿಂತೆಗೀಡುಮಾಡುವ ವಿಚಾರಗಳು ಜೀವರಸವನ್ನು ಬರಿದು ಮಾಡದಿರಲಿ. ಉತ್ತಮ ಆರೋಗ್ಯ ಮತ್ತು ಕಸುವಿನ ಚಟುವಟಿಕೆಗಳ ಗುಟ್ಟೆಂದರೆ ಮನಸ್ಸನ್ನು ಯಾವತ್ತೂ ಉತ್ಸಾಹ, ಉಲ್ಲಾಸದಿಂದ ತುಂಬಿಕೊಂಡಿರುವುದು. ಎಂದೂ ಚಿಂತೆ ಮಾಡದಿರುವುದು, ಎಂದೂ ಅವಸರಪಡದಿರುವುದು ಮತ್ತು ಯಾವುದೇ ಭಯ. ಯೋಚನೆ, ಆತಂಕಕ್ಕೆ ಮಣಿಯದಿರುವುದು.

ನಿಜವಾದ ಶಿಕ್ಷಣದ ಮೂಲ ಉದ್ದೇಶವೇ ಜನರು ಸರಿಯಾದ ಕೆಲಸಗಳನ್ನು ಮಾಡುವಂತೆ ಮಾಡುವುದಷ್ಟೇ ಅಲ್ಲ, ಸರಿಯಾದ ಕೆಲಸಗಳನ್ನು ಆನಂದಿಸುವಂತೆ ಮಾಡುವುದು; ಶ್ರಮವಹಿಸಿ ಕೆಲಸ ಮಾಡುವುದನ್ನು ಕಲಿಸುವುದಷ್ಟೇ ಅಲ್ಲ ಪರಿಶ್ರಮವನ್ನು ಪ್ರೀತಿಸಲು ಕಲಿಸುವುದು.

ನಮಗೆ ದೇವರು ನೀಡಿರುವ ಜವಾಬ್ದಾರಿ ಮತ್ತು ನಮ್ಮ ಅತ್ಯಂತ ಶ್ರೇಷ್ಠ, ಧಾರ್ಮಿಕ ಕರ್ತವ್ಯವೆಂದರೆ ನಮ್ಮನ್ನು ಸದಾ ಹರ್ಷಪೂರ್ಣವಾಗಿರಿಸಿಕೊಳ್ಳುವುದು. ನಮ್ಮ ಸಾಮಾಜಿಕ ಕರ್ತವ್ಯ, ನೆರೆಹೊರೆ ಇವೆಲ್ಲ ನಾವು ಉಲ್ಲಾಸ, ಶಾಂತಿಯಿಂದ ಇರಲೋಸುಗ ಅಗತ್ಯ. ಕೌಟುಂಬಿಕ ಸಂಬಂಧಗಳು, ಕರ್ತವ್ಯಗಳು, ನಮ್ಮೊಳಗಿನದೇ ಬೇಡಿಕೆಗಳು–ಎಲ್ಲವೂ ಎಲ್ಲ ಸ್ಥಿತಿಗಳಲ್ಲೂ ನಾವು ಸಂತೋಷದಿಂದಿರುವುದಕ್ಕಾಗಿ ಇವೆ ಅಷ್ಟೆ.

ನಿನಗೆ ನೀನು ಸತ್ಯವಾಗಿದ್ದರೆ ಸಾಕು, ಪ್ರಪಂಚದ ಗೊಡವೆ ನಿನಗೆ ಬೇಡ. ಉಳಿದದ್ದೆಲ್ಲವೂ ತಂತಾನೇ ನಿನಗೆ ತಲೆಬಾಗುತ್ತವೆ. ಇಷ್ಟಕ್ಕೂ ನಿನಗೆ ಯಾರು, ಯಾವುದು ತಲೆ ಬಾಗಿದರೇನು ಬಾಗದಿದ್ದರೇನು, ನೀನು ಸ್ವತಃ ಸಂತಸದಿಂದಿರುವೆಯಲ್ಲ? ಖಿನ್ನತೆ ಮತ್ತು ಮ್ಲಾನತೆಯಿಂದ ಕೂಡಿರುವುದೆಂದರೆ ಧಾರ್ಮಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಸಾಂಸಾರಿಕವಾಗಿ ಮಹಾಪರಾಧ ಮಾಡಿದಂತೆ. ಮನುಷ್ಯ ಮಾಡಲು ಸಾಧ್ಯವಾದುದು ಇದೊಂದೇ ಅಪರಾಧ. ಈ ಅಪರಾಧವೇ ಇತರೆಲ್ಲಾ ಅಪರಾಧಗಳಿಗೆ, ದುಷ್ಕಾರ್ಯಗಳಿಗೆ, ಪಾಪಗಳಿಗೆ ಮೂಲ.



ಪ್ರಶಾಂತತೆ ಮತ್ತು ಭಾವೋದ್ರೇಕವಿಲ್ಲದ ಸಮಾಧಾನವಿದ್ದರೆ ಸುತ್ತಣ ಎಲ್ಲವೂ ನಿಯಮವೆಂಬಂತೆ ತಂತಾನೇ ನಮಗೆ ಹೊಂದಿಕೊಳ್ಳುತ್ತವೆ. 'ಹರ್ಷಚಿತ್ತ' ಮತ್ತು 'ಶಾಂತಿ'ಗಳೆಂಬ ಪವಿತ್ರ ನಿಯಮಗಳನ್ನು ಉಲ್ಲಂಘಿಸಿದವನು ತನಗೆ ತಾನೇ ಅಕ್ಷಮ್ಯ ಅಪರಾಧಿ. ನಮ್ಮೊಳಗೇನಿದೆಯೋ ಅದೇ ನಮಗೆ ದೊರಕುತ್ತದೆ. ಪರಮಾತ್ಮನ ಸಂತಸ ಈಗಿಂದೀಗಲೇ ನಿನ್ನೊಳಗಿದ್ದರೆ ಯಶಸ್ಸಿನ ಸಂತಸ ನಿನ್ನೆಡೆಗೆ ತಾನಾಗೇ ಆಕರ್ಷಿತಗೊಳ್ಳುತ್ತದೆ. ಅದೇ ನಿಯಮ.

ಚಿಂತನೆ ನಮ್ಮನ್ನು ಆವರಿಸಿಕೊಳ್ಳತಕ್ಕದ್ದೇ, ಆದರೆ ಅದನ್ನು ಆತುಕೊಂಡಿರಬೇಕೆಂದಿಲ್ಲ. ಸೆಕೆಯೆನಿಸಿದಾಗ ಕೋಟನ್ನು ತೆಗೆಯುವಂತೆ ಕುಶಲ ಕೆಲಸಗಾರ ಕೆಲಸ ಮುಗಿದೊಡನೆ ಉಪಕರಣಗಳನ್ನು ಬದಿಗಿಡುತ್ತಾನೆ. ಯಾವುದೇ ಕೆಲಸ ಮಾಡುವಾಗ ಸಂಪೂರ್ಣವಾಗಿ ಅದರಲ್ಲೇ ತಲ್ಲೀನವಾಗಿರಬೇಕೇ ವಿನಃ ಅಪ್ರಸಕ್ತ ವಿಷಯಗಳಿಂದ ಹಾದಿ ತಪ್ಪಕೂಡದು. ಅಗಾಧ ಶಕ್ತಿ ಮತ್ತು ಮಿತವ್ಯಯದಿಂದ ಕೆಲಸ ಮಾಡುವ ಬೃಹತ್ ಯಂತ್ರವೊಂದು ಏಕಕಾಲದಲ್ಲಿ ವಿವಿಧ ಬಗೆಯ ಕಾರ್ಯದಲ್ಲಿ ತೊಡಗಿದ್ದರೂ ಯಾವುದೇ ಘರ್ಷಣೆ ಅಥವಾ ಭಾಗಗಳ ಕೀಲು ತಪ್ಪುವಿಕೆಯಿಲ್ಲದೆ ಮುನ್ನುಗ್ಗಿ ಕಾರ್ಯ ನಿರ್ವಹಿಸುವ ಹಾಗೆ.

ಕೆಲಸಗಳೆಲ್ಲ ಮುಗಿದ ತರುವಾಯ, ಯಂತ್ರದ ಉಪಯೋಗ ಇನ್ಯಾವ ಸಂದರ್ಭಗಳಲ್ಲೂ ಇಲ್ಲ ಎಂದಾಗುವಾಗ ಅದು ಸಂಪೂರ್ಣವಾಗಿ ಸ್ಥಗಿತಗೊಳ್ಳಬೇಕು. ಶೆಡ್ಡಿನಲ್ಲಿ ನಿಲ್ಲಿಸಿದ ನಂತರ ರೈಲಿನ ಎಂಜಿನಿನೊಂದಿಗೆ ಕಿಲಾಡಿತನ ತೋರಲು ಹುಡುಗರ ಗುಂಪೊಂದಕ್ಕೆ ಅನುಮತಿ ನೀಡಲಾಗಿದೆಯೆಂಬಂತೆ ಚಿಂತಿಸುವ ಅಗತ್ಯವಿಲ್ಲ.

ತನ್ನ ನಿಜ ಅಂತರಾತ್ಮ ನೆಲೆಸಿರುವ ಪ್ರಜ್ಞೆಯ ಸ್ತರಕ್ಕೆ ಮನುಷ್ಯ ಮರಳಿ ವಿಶ್ರಮಿಸಲೇಬೇಕು.

* * * *

# ೫. ಭಾರತದ ಸಮಸ್ಯೆ

ಏಕತೆ, ಏಕತೆ. ಏಕತೆಯ ಅಗತ್ಯ ಇದೆ ಎಂದು ಎಲ್ಲರಿಗೂ ಅನಿಸುತ್ತದೆ. ಅಸಂಖ್ಯ ಶಕ್ತಿಗಳು ಒಂದನ್ನೊಂದು ಪರಿಣಾಮಹೀನಗೊಳಿಸುತ್ತಿವೆ. ಯಾವ ಶಕ್ತಿಯೂ ಪರಿಣಾಮ ಬೀರುತ್ತಿಲ್ಲ. ಲಕ್ಷಾಂತರ ಮಿದುಳು, ಕೈಗಳು ದೂರ ದೂರ ಸರಿಯುತ್ತಿವೆ. ಎತ್ತ? ಹೇಳಬಲ್ಲವರಾರು? ಸಾವಿರಾರು ಪಂಥ, ವರ್ಗಗಳಲ್ಲಿ ಪ್ರತಿಯೊಂದೂ ತನಗೆ ತೋಚಿದ ದಿಕ್ಕಿನಲ್ಲಿ ತನ್ನದೇ ಚಪಲಕ್ಕೆ ತಕ್ಕಂತೆ ಹುಟ್ಟು ಹಾಕುತ್ತಿದೆ. ನಿಯಮಿತವಾದೊಂದು ನಡೆಸುವಿಕೆಯಿಲ್ಲ! ಹುಟ್ಟುಗಳು ಎಲ್ಲಿವೆಯೋ ಅಲ್ಲೇ ಇರಲಿ. ಪ್ರತಿಯೊಬ್ಬರೂ ತಮ್ಮ ಸ್ಥಾನದಲ್ಲಿದ್ದು, ಸ್ಥಳ ಬದಲಿಸದೆ ನಿಂತು ಒಂದೇ ದಿಕ್ಕಿನಲ್ಲಿ ದೋಣಿ ಹಾಯಿಸಬೇಕು. ಇಂತಹ ಸಾಮರಸ್ಯ ಮತ್ತು ವಿವಿಧತೆಯಲ್ಲಿ ಏಕತೆಯಿಂದ ಮಾತ್ರ ಪ್ರಗತಿ ಸಾಧ್ಯ. ಹೀಗೆ ನಿಮ್ಮ ನಿಮ್ಮ ಸ್ಥಾನಗಳಲ್ಲಿದ್ದುಕೊಂಡೇ ಕೆಲಸ ಮಾಡುತ್ತ ಹಾಡುತ್ತ ಮುಂದುವರೆಯಿರಿ. ಇದು ರಾಷ್ಟ್ರಹಿತಕ್ಕೆ ಅಗತ್ಯ, ಮತ್ತು ಇಡೀ ರಾಷ್ಟ್ರದ ಹಿತದಲ್ಲಿ ಪ್ರತಿಯೊಂದು ಭಾಗದ ಹಿತವಿದೆ.

ಹೀಗೆ ಮಾತನಾಡುವುದು ಕೇವಲ ಮಾತಿನ ನೈಪುಣ್ಯವಾಗುತ್ತದೆ. ಆದರೆ ಇಷ್ಟು ದೀರ್ಘ ಕಾಲದವರೆಗೂ ಏಕತೆ ಮತ್ತು ಸಾಮರಸ್ಯದ ಭಾವ ಭಾರತದಲ್ಲಿ ಕಾಣದೇ ಇರುವುದು ಯಾಕೆ?

ಇದಕ್ಕೆ ಮುಖ್ಯ ಕಾರಣಗಳು:

(ಅ) ವ್ಯಾವಹಾರಿಕ ವಿವೇಕದ ಕೊರತೆ ಮತ್ತು

(ಆ) ಅತಿಯಾದ ಜನಸಂಖ್ಯೆ

ಖುರಾಸಾನ್‌ನ ಅಲ್ಬೆರೂನಿ ಈ ದೇಶದಾದ್ಯಂತ ಸುತ್ತಾಡಿದ. ಪೂರ್ವಾಗ್ರಹರಹಿತ ತತ್ವಜ್ಞಾನಿ, ಸುಸಂಸ್ಕೃತ ಪಂಡಿತ ಆತ. ತಾನು ಕಂಡ ಇಂಡಿಯಾದ ಸವಿವರ ವರ್ಣನೆ ಮಾಡಿದ್ದಾನೆ. ಹಿಂದೂ ತತ್ವಶಾಸ್ತ್ರ, ಕಾವ್ಯ ಮತ್ತು ಖಗೋಳ ವಿಜ್ಞಾನದ ಕುರಿತು ಅಪಾರ ಗೌರವದಿಂದ ಮಾತನಾಡುತ್ತಾನೆ. ತಾನು ಭೇಟಿ ಮಾಡಿದ ಪಂಡಿತರ ವಿದ್ವತ್ತನ್ನು ಹಾಡಿ ಹೊಗಳುತ್ತಾನೆ. ಆದರೆ ಜನಸಾಮಾನ್ಯರ ಮತ್ತು ಮಹಿಳೆಯರ ಸ್ಥಿತಿ ಶೋಚನೀಯವಾಗಿದೆ ಎನ್ನುತ್ತಾನೆ ....... ತರುವಾಯ ಬಾಬರ್ ಭಾರತದ ಮೂಲ ನಿವಾಸಿಗಳ ಬಗ್ಗೆ ಹೇಳುತ್ತಾ ಅವರಲ್ಲಿ ಯಾವುದೇ ರೀತಿಯ ಕೌಶಲ್ಯ, ಸ್ವಂತಿಕೆ, ದಕ್ಷತೆ ಇಲ್ಲ; ಕೈಗಾರಿಕಾ ಕಲೆ, ಲಲಿತಕಲೆಗಳ ಕುರಿತು ಏನೇನೂ ತಿಳಿದವರಲ್ಲ; ವಾಸ್ತುಶಿಲ್ಪ, ಉದ್ಯಾನವನ, ಕಾಲುವೆ, ಸಿಡಿಮದ್ದು ಸಹ ಇಲ್ಲದವರು ಎಂದು ದೂಷಿಸುತ್ತಾನೆ. ಒಬ್ಬರ ಜೊತೆ ಒಬ್ಬರು ಸಲೀಸಾಗಿ ಜತೆಗೂಡುವ ಸಾಮರ್ಥ್ಯವಿಲ್ಲದ ಜನ ಎಂದು ಹೀಗಳೆಯುತ್ತಾನೆ.



ಈ ವೃತ್ತಾಂತಗಳಲ್ಲಿರಬಹುದಾದ ವೈಯಕ್ತಿಕ ಸಮೀಕರಣ ಮತ್ತು ಅತಿಶಯೋಕ್ತಿಗಳನ್ನು ವಜಾ ಮಾಡಿ ನೋಡಿದರೂ ಕೂಡಾ, ದುರದೃಷ್ಟವಶಾತ್ ಈ ವಾಕ್ಯಗಳಲ್ಲಿ ಸತ್ಯಾಂಶವಿದೆ ಎಂಬುದು ಕಾಣುತ್ತದೆ. ಖಂಡಿತವಾಗಿಯೂ ವ್ಯಾವಹಾರಿಕ ಜ್ಞಾನ ಮತ್ತು ವಿವೇಕದ ಕೊರತೆಯೇ ಭಾರತದ ಅವನತಿಗೆ ಕಾರಣ.

ವಿದೇಶೀಯರು ಹೇಳಿರುವುದನ್ನು ಬೇರೆ ಯಾರೇ ಮಾಡುವಷ್ಟು ಸುಲಭವಾಗಿ ರಾಮನೂ ತಾರ್ಕಿಕವಾಗಿ ಅಲ್ಲಗಳೆಯಬಹುದು. ಆದರೆ ಏನು ಮಾಡುವುದು? ತಾವು ಕಂಡ ವಿಷಯವನ್ನು ಅವರು ವಸ್ತುನಿಷ್ಠವಾಗಿ, ಪ್ರಾಮಾಣಿಕವಾಗಿ ಬರವಣಿಗೆಗಿಳಿಸಿದ್ದಾರೆ. ಸ್ವಯಂವೇದ್ಯ ಸತ್ಯಗಳನ್ನು ನಾನು "ಇಲ್ಲ" ಎಂದೆನ್ನಲು ಹೇಗೆ ಸಾಧ್ಯ? ಮೊದಲೇ ಹೇಳಿದಂತೆ ದೈಹಿಕ ಶ್ರಮದ ಬಗ್ಗೆ ತಿರಸ್ಕಾರ, ಜಾತಿ ಕುಲಗಳ ಆಧಾರದ ಮೇಲೆ ಮಾಡಿದ ವಿಭಜನೆ ಮತ್ತು ಉಪವಿಭಜನೆಗಳು, ವಿದೇಶ ಪ್ರಯಾಣದ ಬಗೆಗೆ ವಿರೋಧ, ಬಾಲ್ಯವಿವಾಹ, ಮತ್ತು ಮಹಿಳೆಯರ ಮೇಲೆ ಹೇರಿದ ಸಾಮಾನ್ಯ ಅಜ್ಞಾನ (ಬೌದ್ಧಿಕ ಮತ್ತು ದೈಹಿಕ) ದಂತಹ ಸಾಮಾಜಿಕ ಪಿಡುಗುಗಳಿಗೆಲ್ಲ ಇಲ್ಲಿನ ವ್ಯಾವಹಾರಿಕ ಜ್ಞಾನದ ಕೊರತೆ ಕಾರಣ ಒದಗಿಸುತ್ತದೆ. ಈ ಸಾಮಾಜಿಕ ಭ್ರಷ್ಟತೆಯನ್ನು ಸರಿಪಡಿಸುವುದು ಕಷ್ಟ. ಬರ್ಕ್ ಹೇಳಿದ್ದು ಸರಿ, "ಸುಧಾರಣೆಯೆನ್ನುವುದು ದೂರದಲ್ಲಿಟ್ಟರಷ್ಟೇ ಮೆಚ್ಚಿಗೆಯಾಗುವಂತಹದೊಂದು ವಸ್ತುವಿನಂತೆ". ಪದ್ಧತಿಯ ಲಂಗರಿನಿಂದ ಕಟ್ಟುಬಿಡಿಸಿಕೊಳ್ಳುವುದು ಪ್ರಯಾಸದ ಕೆಲಸ. ಈ ಬಗೆಯ ಸುಧಾರಣೆಗೆ ಹೊರಟ ಕಾರ್ಯಕರ್ತರಿಗೆ ಸಮಾಜದಿಂದಲೂ, ಕಾರ್ಯಕರ್ತರಿಂದ ಸಮಾಜಕ್ಕೂ ಕಟು ಟೀಕೆಗಳೂ ಖಂಡನೆಗಳೂ ಅನಿವಾರ್ಯವಾದುದರಿಂದ ವೈಮನಸ್ಯ, ಅಪಾರ್ಥ ಮತ್ತು ಒಡಕಿಗೆ ಕಾರಣವಾಗುತ್ತವೆ. ಈ ಒಡಕಿನಿಂದ ಪಾರಾಗುವುದಕ್ಕಾಗಿ ವಿಷಯಗಳನ್ನು ಒಟ್ಟಾರೆಯಾಗಿ ಹರಿಯಬಿಟ್ಟು ನಮ್ಮ ಪಾಡಿಗೆ ನಾವಿದ್ದುಬಿಡುವ ಜಾಣ್ಮೆಯನ್ನು ಮೆರೆಯಬೇಕೆ? ನಮ್ಮ ಮೋಕ್ಷದ ಬಗೆಗಷ್ಟೇ ತಲೆಕೆಡಿಸಿಕೊಂಡು ಸಮಾಜವನ್ನು ಒಂಟಿಯಾಗಿ ಬಿಟ್ಟುಬಿಡುವುದೇ? ಓಹ್! ಹಾಗೆ ಮಾಡುವಂತಿದ್ದಿದ್ದರೆ! ಆದರೆ ಮುಳುಗುತ್ತಿರುವ ಸಮಾಜ ನಮ್ಮೊಬ್ಬರನ್ನೇ ಬಿಟ್ಟು ಮುಳುಗುವುದಿಲ್ಲ! ಅದು ಮುಳುಗಿದರೆ ನಾವೂ ಮುಳುಗಬೇಕು, ಅದು ಎದ್ದರೆ ನಾವೂ ಏಳುತ್ತೇವೆ. ಅಪರಿಪೂರ್ಣ ಸಮಾಜದಲ್ಲಿ ವ್ಯಕ್ತಿಯೊಬ್ಬ ಪರಿಪೂರ್ಣನಾಗಿರಲು ಸಾಧ್ಯ ಎಂದು ನಂಬುವುದು ಶುದ್ಧ ಅಸಂಬದ್ಧತೆ. ಹಾಗಾದಲ್ಲಿ ಶರೀರದಿಂದ ತನ್ನನ್ನು ಬೇರ್ಪಡಿಸಿಕೊಂಡ ಕೈ ಪೂರ್ಣ ಶಕ್ತಿಯನ್ನು ಪಡೆದುಕೊಳ್ಳಬೇಕು.

ವೇದಾಂತಕ್ಕೆ ವಿರುದ್ಧವಾದ ಇಂತಹ ಚಿಂತನೆಯನ್ನು ಭಾರತದಲ್ಲಿ ಹಲವಾರು

ವರ್ಷಗಳಿಂದ ಕಾಣಬಹುದು. ಇದರಿಂದಾಗಿ ಇಲ್ಲಿನ ಸಮಾಜ ಛಿದ್ರ ವಿಚ್ಛಿದ್ರವಾಗಿ ಹೋಗಿದೆ. ಆಶಾಜನಕ ಯುವಜನರು! ಇಂಡಿಯಾದ ಭವಿಷ್ಯ ನಿಮ್ಮ ಭವಿಷ್ಯ, ಮತ್ತು ಅದಕ್ಕೆ ಜವಾಬ್ದಾರರು ನೀವು (ಲಾಹೋರಿನ ವೈ.ಎಂ.ಐ.ಎ. ನಲ್ಲಿ ಮಾಡಿದ ಭಾಷಣ). ಬಹುಸಂಖ್ಯಾತರ ಅಂಧ ವಿಶ್ವಾಸಗಳಿಂದ ಹೇಡಿಗಳು ಆಳಲ್ಪಡುತ್ತಾರೆ. ಹೊರನೋಟಕ್ಕೆ ಆಳ್ವಿಕೆ ನಡೆಸುವವನು ಯಾರೇ ಆಗಿರಲಿ ಜನರ ಮನಸ್ಸು ಚಿಂತನೆಗಳನ್ನು ಆವರಿಸಿಕೊಳ್ಳುವವನೇ ಅಪ್ಪಟ ಜೀವಿ. ವಿಶ್ವವಿದ್ಯಾಲಯಗಳಿಂದ ಬಿ.ಎ., ಎಂ.ಎ. ಪದವಿಗಳನ್ನು ಪಡೆಯಬಹುದು. ಆದರೆ ಹೇಡಿ ಅಥವಾ ಧೈರ್ಯಶಾಲಿಯಾಗುವುದನ್ನು ನಾವೇ ಆರಿಸಿಕೊಳ್ಳಬೇಕು. ಹೇಳಿ, ನಿಮಗೆ ಯಾವ ಸ್ಥಾನ ಬೇಕು? ದೀನ ಗುಲಾಮನದೋ ಅಥವಾ ರಾಜನದೋ? ದೃಢ ಮತ್ತು ಚೊಕ್ಕ ಬದುಕು ಇತಿಹಾಸದ ಸನ್ನೆಗೋಲಿದ್ದಂತೆ. ನ್ಯೂಟನ್‌ನ ಎರಡನೇ 'ಲಾ ಅಫ್ ಮೋಷನ್'ನ ಪ್ರಕಾರ ತಾನು ಕೆಲಸಮಾಡುವ ವಸ್ತುವಿನ ಚಲನೆಯಲ್ಲಿ ಒಂದು ಬದಲಾವಣೆಯನ್ನು ತರುತ್ತದೆ ಶಕ್ತಿ.

ಶತಶತಮಾನಗಳಿಂದ ಅಸಹಜ ವೈರತ್ವ ಮತ್ತು ಅದಕ್ಕಿಂತ ಹೀನ ಎನಿಸುವಂತಹ ಭಾವನಾರಾಹಿತ್ಯವೆಂಬುದು ನಮ್ಮ ದೇಶದಲ್ಲಿ ಸಂಪ್ರದಾಯ ಮತ್ತು ಮೂಢ ನಂಬಿಕೆಗಳೆಂಬ ಹಳಿಗಳ ಮೇಲೆ ಜೊತೆ ಜೊತೆಯಾಗಿ ಮುನ್ನಡೆಯುತ್ತಿವೆ. ಈ ರೀತಿಯ ನಿಷ್ಪ್ರಯೋಜಕ ಚಲನೆಯನ್ನು ಜೀವಂತ ಸಂಚಾರವಾಗಿ ಬದಲಿಸುವ ಜವಾಬ್ದಾರಿ ಸಂಸ್ಕೃತಿ ಮತ್ತು ಚಾರಿತ್ರ್ಯವಿರುವ ಯುವಜನರಾದ ನಿಮ್ಮದು. ಜಡವಸ್ತುವಿನಂತೆ ನಿಂತಲ್ಲೇ ಚಲಿಸುವ ಗುಣ ತೊರೆದು ಬೇಕಾದ ದಿಕ್ಕಿಗೆ ಚಲನೆಯನ್ನು ಪ್ರವಹಿಸಿ, ಬೇಕಾದೆಡೆ ಓಟವನ್ನು ಹೆಚ್ಚಿಸಿ, ಅಗತ್ಯವಿದ್ದಲ್ಲಿ ಚಲಿಸುವ ವಸ್ತುವಿನ ಸ್ವರೂಪವನ್ನೇ ಬದಲಿಸಿ. ಕಾರ್ಯೋನ್ಮುಖರಾಗಿ. ಗತಕಾಲಕ್ಕೊಂದು ರೂಪ ಕೊಟ್ಟು ಅದನ್ನು ವರ್ತಮಾನಕ್ಕೆ ಅಳವಡಿಸಿ ಭವಿಷ್ಯದ ಓಟಕ್ಕೆ ತಕ್ಕನಾಗುವಂತೆ ಮಾಡಿ.

'ನಮ್ಮ ಪೂರ್ವಜರಿಂದ ಬರುವ ಪಿತ್ರಾರ್ಜಿತ ಬಾಧ್ಯತೆಗಳಿಲ್ಲದೇ ನಾವು ಏನನ್ನೂ ಮಾಡಲಾರೆವು. ಅದನ್ನು ತ್ಯಜಿಸುವ ಸಮಾಜದ ಹೊರರೂಪವೇ ನಾಶವಾಗಿರುತ್ತದೆ. ಹಾಗೇ, ಅಂತಹ ಪಿತ್ರಾರ್ಜಿತ ಬಾಧ್ಯತೆಗಳು ಅತಿಯಾದರೂ ಮತ್ತಷ್ಟು ನಿಷ್ಕ್ರಿಯರಾಗುತ್ತೇವೆ. ಯಾವ ಸಮಾಜದಲ್ಲಿ ಅವುಗಳದೇ ಆಧಿಪತ್ಯವಿರುತ್ತದೋ ಅಂತಹ ಸಮಾಜ ಆಂತರ್ಯದಿಂದಲೇ ಧ್ವಂಸವಾಗಿ ಹೋಗುತ್ತದೆ.' ನಿಮ್ಮ ಸತ್ಯ ನಿಷ್ಠುರ ಬದುಕು ಸಮಾಜದ ವಿರೋಧ ಮತ್ತು ಒಡಕನ್ನು ಎದುರಿಸುತ್ತಿದೆಯೇ? ನಿಮಗೆ ಹಾಗನಿಸುತ್ತಿದೆಯೇ? ದೃಢವಾಗಿ ನಿಲ್ಲಿ, ಒಂಟಿಯಾದರೂ ಸರಿ, ಹಿಮ್ಮೆಟ್ಟಬೇಡಿ. ಅದೇ ಪೌರುಷ, ಸಾಹಸ. ವರ್ತಮಾನದ ಅಲೆಗಳೂ ನಿಮ್ಮ ಕಡೆಯಿವೆ. ಗತದ ಮೇಲೆ ಯಾರಾದರೂ ಹಕ್ಕು ಚಲಾಯಿಸಿಕೊಳ್ಳಲಿ. ಭವಿಷ್ಯವೆಲ್ಲ ನಿಮ್ಮದು. ಆದರೆ ಸತ್ಯದ ಮಾರ್ಗದಿಂದ ಯಾವತ್ತೂ ದೂರ ಸರಿಯಬೇಡಿ.



ರಾಷ್ಟ್ರದ ಕುರಿತು ಹೇಳುವುದಾದರೆ ಪ್ರಾಮಾಣಿಕತೆ ಮತ್ತು ಋಜುತೆಗಾಗಿ ಅಲ್ಲದ ಒಗ್ಗೂಡುವಿಕೆ ಅವಳನ್ನು ಕಾಪಾಡೀತೇನು? ಜನರನ್ನು ಅಂಧಕಾರದಲ್ಲಿರಿಸಿ ಅವರನ್ನು ಒಂದುಗೂಡಿಸಲು ಸಾಧ್ಯವೇ?, ಅಂಧವಿಶ್ವಾಸ, ಪ್ರಮಾದಗಳ ಗುಲಾಮಗಿರಿಯಿಂದ ದೇಶದಲ್ಲಿ ಸಾಮರಸ್ಯ ತರಲು ಹೇಗೆ ಸಾಧ್ಯ? ಎಲ್ಲ ನಾವಿಕರೂ ಒಂದೇ ದಿಕ್ಕಿನೆಡೆಗೆ ಸಾಗಿದರೂ, ಆ ದಿಕ್ಕೇ ಸತ್ಯ ಮತ್ತು ವಿಕಸನದ್ದಲ್ಲದೆ ನೇತ್ಯಾತ್ಮಕವಾದದ್ದಾದರೆ ಅಂತಹುದು ಬೇಕೇ? ಹಾಗೆ ಹೊರಟ ನಾವೆ ನಿಸ್ಸಂಶಯವಾಗಿ ಬಂಡೆಗೆ ಬಡಿದು ನುಚ್ಚುನೂರಾಗಿ ಹೋಗುವುದು; ಹಾಗೆ ಬೇಗ ಆದಷ್ಟೂ ಒಳ್ಳೆಯದು. ಆಗ ಸ್ವರ್ಗದಲ್ಲಿ ಮಾತ್ರ ಭೇಟಿ ಸಾಧ್ಯ. ಸತ್ಯ ಮತ್ತು ಪರಿಶುದ್ಧತೆಗಾಗಿ ಮಾತ್ರ ಒಂದಾಗಬೇಕು. ರಾಷ್ಟ್ರೈಕ್ಯತೆಯ ಹಂಬಲಿಗರು! ಮೊತ್ತಮೊದಲಿಗೆ ರಾಷ್ಟ್ರವನ್ನು ಅದರ ಅಸಂಖ್ಯ ದೋಷಗಳಿಂದ ಮುಕ್ತಗೊಳಿಸಿ. ಸತ್ಯ ಮತ್ತು ಪ್ರಗತಿಗಾಗಿ ಕೆಲವೊಮ್ಮೆ ಮಾನವ ಕುಲ ಜನಸಾಮಾನ್ಯರನ್ನು ಪೀಡಿಸಿದರೆ, ಕಾರ್ಮಿಕರನ್ನು ಹಿಂಸಿಸಿದರೆ, ಅದರರ್ಥ ದೇಶದ ಆಧ್ಯಾತ್ಮಿಕತೆ ಜೀವಂತವಾಗಿದೆ, ಅದರ ಉಸಿರಿನ ಏರಿಳಿತ ಸರಿಯಾಗಿದೆ ಎಂದು.

ಆದರ್ಶ ವರ್ತನೆಗೆ ನೋವೆಂಬುದಿಲ್ಲ. ಅದು ಶಾಂತವಾಗಿದ್ದು, ಯಾವತ್ತೂ ಪ್ರೀತಿ ಮತ್ತು ಬೆಳಕನ್ನು ತನ್ನ ಸುತ್ತ ಪಸರಿಸುತ್ತದೆ. ಆದರೆ ಯಾವ ಸಮಾಜದಲ್ಲಿ ಬೆಳಕಿನ ಆಗಮನವನ್ನು ಶಿಕ್ಷೆಯಂತೆ ಪರಿಗಣಿಸಲಾಗುತ್ತದೆಯೋ ಅಲ್ಲಿ 'ನೋವುರಹಿತ ಶಾಂತಿ' ಮತ್ತು 'ಎಚ್ಚರಿಸುವ ಬೆಳಕು' ಇರುವುದಾಗಲೀ, ಜೊತೆಯಾಗಿ ಮುನ್ನಡೆವುದಾಗಲೀ ಹೇಗೆ ಸಾಧ್ಯ?

ಹೀಗಾಗಿ ಪರಿಸ್ಥಿತಿಗನುಗುಣವಾಗಿ ಆದರ್ಶ ವರ್ತನೆ ಸಾಧ್ಯವಿಲ್ಲವೆಂದಾದರೆ, ಕೊನೆಯ ಪಕ್ಷ ನೈಜ ವರ್ತನೆಯಾದರೂ ಇರಲಿ. ಅತ್ಯಗತ್ಯವಾಗಿರುವುದು ಅದೇ. ಒಂದು ದೇಶಕ್ಕೆ ಬಲ ಬರುವುದು ದೊಡ್ಡ ಮನುಷ್ಯರ ಸಣ್ಣ ವಿಚಾರಗಳಿಂದಲ್ಲ, ಸಣ್ಣ ಮನುಷ್ಯರ ದೊಡ್ಡ ವಿಚಾರಗಳಿಂದ.

ಶಾಂತಿ? ಪಶುಸ್ವಭಾವದ ಜಡತೆಯೂ ಶಾಂತಶೀಲ, ಅಹಿತಕರ ಸ್ಮಶಾನವೂ ಶಾಂತವೇ. ಆದರೆ ನಾವು ಆಶಿಸುವುದು ಜೀವಂತ ಶಾಂತಿಯನ್ನು, ನಿರ್ಜೀವವಾದುದನ್ನಲ್ಲ! ಕತ್ತಲಲ್ಲಿ ಜನರು ಎಡವಿ ಬೀಳುತ್ತಿರುವಾಗ ಕೈಯಲ್ಲಿರುವ ಬೆಳಕನ್ನು ಅಳತೆಯ ಸೇರಿನಡಿ ಇಟ್ಟುಬಿಡುವುದು ಕೈಯ್ಯಲ್ಲಿ ಬೆಳಕಿಲ್ಲದಿರುವುದಕ್ಕಿಂತ ನಿಷ್ಪ್ರಯೋಜಕ. ಅಂತಹ ಗಳಿಗೆಗಳಲ್ಲಿ ಸಹಾಯಕವಾಗುವಂತಹ ನಾಲ್ಕು ಮಾತನ್ನು ಆಡುವ ಸ್ಥಾನದಲ್ಲಿದ್ದೂ ಮೌನದ ಮೊರೆ ಹೋಗುವವನು ಪರಮಾಪರಾಧಿ......

ಕುಕೃತ್ಯಗಳಲ್ಲಿ, ಅಕೃತ್ಯಗಳಲ್ಲಿ ಪ್ರಾಣಶಕ್ತಿಯನ್ನು ಅಜಾಗರೂಕತೆಯಿಂದ ವ್ಯಯಿಸಲಾಗುತ್ತಿದೆ! ಬದಲಿಗೆ ಅದನ್ನು ಮಹಿಳೆಯರ ಏಳಿಗೆಗೆ, ಜನಸಾಮಾನ್ಯರ ಶಿಕ್ಷಣಕ್ಕೆ, ಆತ್ಮೋದ್ಧಾರಕ್ಕೆ, ಕಡೆಗೆ ರಾಷ್ಟ್ರದ ಉತ್ಥಾನಕ್ಕೆ ಬಳಸಿಕೊಳ್ಳುವ ಪ್ರಯತ್ನ

ನಡೆಯಬೇಕು. ಇದನ್ನು ಸಾಧಿಸುವ ಅತ್ಯಂತ ಸುಲಭ ಮತ್ತು ನೇರ ಮಾರ್ಗವೆಂದರೆ ಭಾರತೀಯ ಪತ್ರಿಕೋದ್ಯಮದ ಗುಣಮಟ್ಟವನ್ನು ಸುಧಾರಿಸುವುದು. 'ಯಂಗ್ ಮೆನ್ಸ್ ಇಂಡಿಯನ್ ಅಸೋಸಿಯೇಷನ್' ನವರು ಸರಳ ಹಿಂದಿ, ಅಥವಾ ಪಂಜಾಬಿ ಬಳಸಿ ಹಿಂದಿ ಲಿಪಿಯಲ್ಲಿ ಒಂದು ಆವೃತ್ತಿ ತರಲಿ. ಸಾಧ್ಯವಾದಷ್ಟು ಮಟ್ಟಿಗೆ ಪರ್ಷಿಯನ್ ಮತ್ತು ಸಂಸ್ಕೃತ ಶಬ್ದಗಳನ್ನು ದೂರವಿರಿಸಿ, ಮನಸ್ಸಿಗೆ ಹತ್ತಿರವಾಗದಂತಹ ಶೈಲಿಯ ಉಪಯೋಗವನ್ನು ಕೈಬಿಡಬೇಕು. ಸಹಜವಾಗಿದ್ದು, ಯಾರನ್ನೂ ಅನುಕರಿಸದೆ, ಅನಿಸಿದಂತೆ ಬರೆಯಬೇಕು. ಕಾಲೇಜು ವಿದ್ಯಾರ್ಥಿಗಳು ಸಣ್ಣ ಲೇಖನಗಳನ್ನು ಬರೆಯಬಹುದು. ಓದುವಾಗ ಅಲ್ಲಲ್ಲಿ ಕಾಣುವ ಹೊಸ ಭಾವನೆಗಳು, ಅರಿವಿನೆಚ್ಚರ ಮೂಡಿಸುವ ಚಿಂತನೆಗಳನ್ನು ನಿಮ್ಮ ಮಾತೃಭಾಷೆಯಲ್ಲಿ ಅಭಿವ್ಯಕ್ತಿಸುವ ಪ್ರಯತ್ನ ಮಾಡಿದರೆ ನಿಮ್ಮ ಓದುಗರಿಗಿಂತ ಹೆಚ್ಚು ಲಾಭವಾಗುವುದು ನಿಮಗೆ. ನಿಮಗಿಂತ ಹೆಚ್ಚು ಓದುಗರಿಗೆ ಲಾಭ ಅಂತ ಕೆಲವರು ಭಾವಿಸಬಹುದು, ಅದು ಬೇರೆ ಮಾತು. ಈ ಕೆಲಸದಲ್ಲಿ ಯಾವುದೂ ನಿಮ್ಮನ್ನು ಅಲುಗಾಡಿಸಬಾರದು, ಆಯಾಸಗೊಳಿಸಬಾರದು. ಮೊತ್ತಮೊದಲಿಗೆ ಹಿಂದಿ ವರ್ಣಮಾಲೆಯಿಂದ ಪ್ರಾರಂಭಿಸಿ, ಅಕ್ಷರಗಳ ಸರಳ ಜೋಡಣೆಯಿಂದ ಪರಿಚಿತ ಶಬ್ದಗಳೆಡೆಗೆ ಸಾಗಬೇಕು. ಅರಿವು ಮತ್ತು ಕಲಿಕೆಯ ಅಗ್ರಗಾಮಿಗಳಾದ ಪುಣ್ಯವಂತ ಕಾಲೇಜು ವಿದ್ಯಾರ್ಥಿಗಳು ಓದು ಬರಹ ಬಾರದ ತಮ್ಮ ಸೋದರಿಯರನ್ನು, ತಾಯಂದಿರನ್ನು, ಮಡದಿಯರನ್ನು, ಹೆಣ್ಣುಮಕ್ಕಳನ್ನು ಅಥವಾ ಬಳಗದ ಇತರ ಮಹಿಳೆಯರನ್ನು ಓದಿಗೆ, ಬರವಣಿಗೆಗೆ ಹಚ್ಚುವ ಆಹ್ಲಾದಕರ ಕರ್ತವ್ಯವನ್ನು ಕೈಗೆತ್ತಿಕೊಂಡು ನಿಭಾಯಿಸಲಿ.

ಪಬ್ಲಿಕ್ ಶಾಲಾ ವ್ಯವಸ್ಥೆಗಾಗಿ ಕಾಯಬೇಡಿ. ಈ ಪವಿತ್ರ ಜವಾಬ್ದಾರಿ 'ನಿಮ್ಮ' ಹೆಗಲ ಮೇಲಿದೆ. ಭಾರತ ಬದುಕುಳಿಯಬೇಕಾದರೆ ಮಹಿಳಾ ಶಿಕ್ಷಣದ ಕೆಲಸ ಎಲ್ಲೆಲ್ಲೂ ನಡೆಯಬೇಕು. ಅದು ನಿಮ್ಮಿಂದಲೇ ಯಾಕೆ ಆರಂಭವಾಗಬಾರದು? ನಿಮ್ಮ ಪ್ರಾಂತ್ಯದಲ್ಲಿ ಯಾವುದೇ ಮಹಿಳೆ, ಬಡ ಪುರುಷ ಅವಿದ್ಯಾವಂತರಾಗಿ ಉಳಿಯದಂತೆ ನೋಡಿಕೊಳ್ಳಿ. ಈ ದೇಶಕ್ಕಂಟಿರುವ ಅಜ್ಞಾನವೆಂಬ ಕಳಂಕವನ್ನು ಅಳಿಸಿಹಾಕಿ. ನಿಮ್ಮ ನೆರೆಯಲ್ಲಿರುವ ಕಸ ಗುಡಿಸುವ ಹೆಂಗಸಿಗೆ ವಿದ್ಯೆ ಹೇಳಿಕೊಡಲು ನಿಮಗೆ ನಾಚಿಕೆಯೇ? ಅಂಜಿಕೆಯೇ? ಹಾಗೆಂದಾದರೆ ನಿಮ್ಮ ರೀತಿ ನೀತಿಗಳಿಗೆ ಧಿಕ್ಕಾರ! ಬಡ, ಅಜ್ಞಾನಿ ಜನರನ್ನು ಮಾತೃ ಕರುಣೆಯಿಂದ ಕಂಡು ಅವರನ್ನು ಶಿಕ್ಷಿತರನ್ನಾಗಿ ಮಾಡಲು ಹವಣಿಸಿ. ಎಂತಹ ಸತ್ಕಾರ್ಯವದು! ವೈ.ಎಮ್.ಐ.ಎ.ನ ಒಂದು ಅಂಗವಾಗಿ ಪ್ರಾಥಮಿಕ ಭೌತಶಾಸ್ತ್ರ, ಖಗೋಳಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರ ಅರ್ಥಶಾಸ್ತ್ರ, ಮನೋವಿಜ್ಞಾನ ಮುಂತಾದುವುಗಳನ್ನು ಆಸಕ್ತಿದಾಯಕ ಮತ್ತು ಸರಳವೆನಿಸುವ ರೀತಿಯಲ್ಲಿ ಪರಿಚಯ ಮಾಡಿಸುವುದು ಒಳಿತು. ಶೈಲಿಯನ್ನು ಬೇಕಾದರೆ ಕೊಂಚ ಪ್ರಾಚೀನವಾಗಿರಿಸಬಹುದು.



ರಾಮನ ಪ್ರಕಾರ ಇದಕ್ಕೆ ಹಿಂದಿ ಲಿಪಿ ಉಪಯೋಗಿಸುವುದು ಒಳಿತು. ಏಕೆಂದರೆ ಸದ್ಯದಲ್ಲೇ ಹಿಂದಿ ಭಾರತದ ರಾಷ್ಟ್ರೀಯ ಭಾಷೆಯಾಗಿ ಪರಿಗಣಿಸಲಾಗುತ್ತದೆ.

ಮಹಿಳೆಯರನ್ನು, ಬಡವರನ್ನು ಸುಶಿಕ್ಷಿತರನ್ನಾಗಿ ಮಾಡುವುದು ನಿಮ್ಮ ಆದ್ಯ ಕರ್ತವ್ಯ. ಸರಿಯಾಗಿ ಕಾರ್ಯರೂಪಕ್ಕೆ ತಂದರೆ ಈ ಕರ್ತವ್ಯ ನಿಮಗೆ ಅತೀವ ಆನಂದ ತರುತ್ತದೆ. ಇದಕ್ಕಿಂತ ನೇರ ಪರಿಣಾಮವಿರುವ ಮತ್ತು ಮಾಡಲೇಬೇಕಾದ ಇನ್ನೊಂದು ಕೆಲಸವನ್ನು ಮರೆಯದಿರಿ. ನಮಗಿಂತ ಮುಂದುವರಿದ ರಾಷ್ಟ್ರಗಳಲ್ಲಿನ ಕೃಷಿ ಮತ್ತು ಕೈಗಾರಿಕಾ ಕಲೆಗಳನ್ನು ಕಲಿತು ಆ ಉಪಯುಕ್ತ ಜ್ಞಾನವನ್ನು ಇಂಡಿಯಾದಲ್ಲಿ ಪ್ರಸಾರಮಾಡಬೇಕು.

ಎಲ್ಲ ಯಶಸ್ವೀ ಚಳುವಳಿಗಳ ಮೂಲದಲ್ಲಿರುವುದು ಜೀವಂತ ನಂಬಿಕೆ ಮತ್ತು ದೇದೀಪ್ಯಮಾನ ಜ್ಞಾನ. ಪ್ರಾಪಂಚಿಕತೆ, ಸಂದೇಹವಾದ, ನಿರ್ದಿಷ್ಟವಾದ, ನಾಸ್ತಿಕತೆ ಮುಂತಾದವುಗಳ ಕಟ್ಟಾ ಅನುಯಾಯಿಗಳೂ ಸಹ ತಮಗರಿವಿಲ್ಲದಂತೆ ತಮ್ಮ ಯಶಸ್ಸನ್ನು ತಮ್ಮೊಳಗಿನ ಧಾರ್ಮಿಕ ಚೈತನ್ಯದಿಂದಲೇ ಪಡೆದಿರುತ್ತಾರೆ. ಕೆಲ ಸಂದರ್ಭಗಳಲ್ಲಂತೂ ಧರ್ಮಪ್ರತಿಪಾದಕರಿಗಿಂತ ಹೆಚ್ಚು ಧಾರ್ಮಿಕತೆಯನ್ನು ಇಂಥವರಲ್ಲಿ ಕಾಣಬಹುದು. ಉದಾಹರಣೆಗೆ, ಒಂದು ರಬ್ಬರ್ ಕಾರ್ಖಾನೆ. ಸಾವಿರಾರು ಖಾಲಿ ಕೈಗಳಿಗೆ ಕೆಲಸ ದೊರಕಿಸಿಕೊಟ್ಟು, ರಾಷ್ಟ್ರೀಯ ವ್ಯಾಪಾರ, ಉದ್ಯೋಗಗಳನ್ನು ತೆರೆದು, ದೇಶದಲ್ಲಿ ಮೂಲಧನವನ್ನು ಹೆಚ್ಚಿಸುತ್ತ, ಗೆಯ್ಮೆಯ ಬಡ ಬದುಕು ನಡೆಸುವ ಜನರಿಗೆ ಉತ್ತೇಜನ ನೀಡುವುದಲ್ಲದೆ, ಉಗಿ ಹಡಗು, ರೈಲ್ವೇ ಕಂಪೆನಿ, ಪೋಸ್ಟ್ ಆಫೀಸು ಮತ್ತು ಇತರೆಡೆಯ ಕಾರ್ಮಿಕರಿಗೂ ಕೆಲಸ ಮತ್ತು ವರಮಾನ ದೊರಕಿಸಿಕೊಡುತ್ತದೆ.

ಆದರೆ ಈ ಎಲ್ಲ ಸಂಗತಿಗಳ ಒಳಗೆ ಯಾವುದೋ ಒಂದು ಆಂತರಿಕ ಪ್ರತಿಕ್ರಿಯೆ ಉಂಟಾಗಿ ಅವಕ್ಕೊಂದು ಔನ್ನತ್ಯ ನೀಡದೆ ಇಡೀ ವ್ಯವಹಾರ ನಡೆಸುವುದು ಹೇಗೆ? ಹಾಗಾದರೆ ಆಂತರಿಕ ಪ್ರತಿಕ್ರಿಯೆ, ಹೃದಯ ಪರಿವರ್ತನೆ, ಮಾನಸಿಕ ಪರಿಷ್ಕರಣ, ಆಧ್ಯಾತ್ಮಿಕ ಸಮೀಕರಣ, ಅಥವಾ ನಿಮ್ಮ ಆತ್ಮದೊಳಗೇ ಆದ ದೈವ ಕ್ರಾಂತಿಗಳಿಂದ ಪಡೆದ ಶೋಭೆ ಮತ್ತು ಭವ್ಯತೆಗಳಿಲ್ಲದೆ ನಿಮ್ಮ ಯಾವುದೇ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ಅಥವಾ ರಾಜನೈತಿಕ ಕಾರ್ಯಗಳು ಅಭಿವೃದ್ಧಿಸಲು ಸಾಧ್ಯವಿಲ್ಲವೇ? ಕಾರ್ಲೈಲ್ ಹೇಳುತ್ತಾನೆ "ನಂಬಿಕೆ ಬಹಳ ಶ್ರೇಷ್ಠ, ಜೀವ ಕೊಡುವಂಥದು". ಒಂದು ರಾಷ್ಟ್ರದ ಇತಿಹಾಸ ಪ್ರಯೋಜನಕಾರಿಯಾಗಿ, ಆತ್ಮೋನ್ನತಿಗೆ ಕಾರಣವಾಗುವುದು ಅದರ ನಂಬಿಕೆಯಿಂದ. ಈ ಅರಬರು, ಮತ್ತವರ ಮಹಮ್ಮದ, ಮತ್ತು ಆ ಶತಮಾನ, ಗಮನ ಸೆಳೆಯದ ಕರಿಯ ಮರಳ ರಾಶಿಯೊಂದರ ಮೇಲೆ ಬಂದಿಳಿದ ಬೆಳಕಿನ ಕಿಡಿಯಂತೆನಿಸುವುದಿಲ್ಲವೇ? ಆದರೆ ಆ ಮರಳರಾಶಿಯೇ ಸಿಡಿಮದ್ದಿನಂತಾಗಿ, ಆಕಾಶಕ್ಕೆ ಸಿಡಿದು.... 'ದೆಹಲಿಯಿಂದ ಗ್ರನಾಡಾದವರೆಗೆ! ಅಲ್ಲಾಹು

ಅಕ್ಬರ್! ದೇವರಿಗಿಂತ ಶ್ರೇಷ್ಠವಾದುದಿಲ್ಲ.'

"ಶ್ರೇಷ್ಠವಾದುದೆಲ್ಲವೂ ಅನಿರ್ವಚನೀಯ ಆಳದಿಂದ ಚಿಮ್ಮುತ್ತದೆ. ಯಾರು ಸಂಪೂರ್ಣವಾಗಿ ದೈವಿಕ ಭಾವದಲ್ಲಿ ಬದುಕುವುದಿಲ್ಲವೋ, ಅಥವಾ ಭಾಗಶಃ ಮಾತ್ರ ಬದುಕುತ್ತಾರೋ, ಅಂಥವರು ಆ ಒಬ್ಬ ದೇವರ ಕುರಿತು ಹಂಬಲಿಸುವುದರ ಬದಲಿಗೆ ಆ ಭಾವದಲ್ಲಿ ಸಂಪೂರ್ಣವಾಗಿ ಜೀವಿಸಲು ಹೋರಾಡುತ್ತಾರೆ. ಅಂಥವರು ಎಲ್ಲೇ ಇದ್ದರೂ, ಯಾವ ವೈಭವದಲ್ಲಿದ್ದರೂ ಅಸ್ತಿತ್ವವಿಲ್ಲದವರಾಗಿ ಸತ್ತಂತಿರುತ್ತಾರೆ."

* * * *



# ೬. ರಾಷ್ಟ್ರ ಧರ್ಮ

ರಾಷ್ಟ್ರೀಯತೆಯ ಕ್ರಿಯಾತ್ಮಕ ಚೈತನ್ಯವನ್ನು ಪಸರಿಸಬಲ್ಲಂಥ ಸಹಯೋಗವನ್ನು ನಾನು ಭಾರತದ ಪ್ರತಿ ಮಗುವಿನಿಂದಲೂ ಬಯಸುತ್ತೇನೆ. ಬಾಲ್ಯವನ್ನು ದಾಟದೇ ಯಾವ ಮಗುವೂ ಕೌಮಾರ್ಯವನ್ನು ತಲುಪುವುದು ಸಾಧ್ಯವಿಲ್ಲ. ತನ್ನ ನರನರದಲ್ಲಿಯೂ ಸಮಸ್ತ ರಾಷ್ಟ್ರದೊಂದಿಗೆ ಲೀನವಾಗದ ಹೊರತು ಯಾರೂ ದೇವರೊಂದಿಗೆ, ಸಮಷ್ಟಿಯೊಂದಿಗೆ ಒಂದಾಗುವುದು ಸಾಧ್ಯವೇ ಇಲ್ಲ. ಪ್ರತಿಯೊಬ್ಬನಲ್ಲಿಯೂ ಇಡಿಯ ಭಾರತ ಮೂರ್ತವಾಗಿರುವುದನ್ನು ಕಂಡುಕೊಂಡು ಭಾರತದ ಪ್ರತಿಯೊಬ್ಬ ಪುತ್ರನೂ ಸಮಷ್ಟಿಯ ಸೇವೆಯಲ್ಲಿ ನಿಲ್ಲಬೇಕು. ಭಾರತದ ಪ್ರತಿಯೊಂದು ಪಟ್ಟಣ, ತೊರೆ, ಮರ, ಕಲ್ಲು ಮತ್ತು ಪ್ರಾಣಿ ಮೂರ್ತವಾಗಿದ್ದು ಪವಿತ್ರವಾದುದು. ಸಂಪೂರ್ಣ ಮಾತೃಭೂಮಿಯನ್ನು ದೈವ ಸ್ವರೂಪಿಯಾಗಿ ಕಂಡು ಅದರ ಅಂಗ ಅಂಗವೂ ನಮ್ಮನ್ನು ಪ್ರೇರೇಪಿಸಲು ಇದು ಸಕಾಲವಲ್ಲವೇ? ಹಿಂದೂಗಳು ಪ್ರಾಣ ಪ್ರತಿಷ್ಠೆಯ ಮೂಲಕ ದುರ್ಗೆಯ ಮೂರ್ತಿಗೆ ಜೀವ ನೀಡುತ್ತಾರೆ. ಭಾರತ ಮಾತೆಯೆಂಬ ನೈಜ ದುರ್ಗೆಯ ಭವ್ಯತೆಯನ್ನು ಆವಾಹಿಸಿಕೊಂಡು ಅವಳಲ್ಲಿ ಜೀವ ತುಂಬುವುದು ಒಳಿತಲ್ಲವೇ? ನಮ್ಮ ಹೃದಯಗಳನ್ನು ಒಂದುಗೂಡಿಸೋಣ, ತಲೆ ಮತ್ತು ಕೈಗಳು ತಂತಾನೆ ಕೂಡಿಕೊಳ್ಳುತ್ತವೆ.

ಪ್ರತಿಯೊಬ್ಬ ಮಾನವನಿಗೂ ತನ್ನ ಮಟ್ಟವನ್ನು ಸಾಧಿಸಲು ಸಮಾನ ಅವಕಾಶವಿದೆ. ಆತ ಎಷ್ಟೂ ಎತ್ತರಕ್ಕೆ ಬೆಳೆಯಬಹುದು, ಆದರೆ ಪಾದ ಮಾತ್ರ ಸಮಾನ ಭೂಮಿಯಲ್ಲಿ ನೆಲೆಸಿರಬೇಕೇ. ಹೊರತು, ಅಸಹಾಯಕನಾದವನ, ಅವನು ಸಮ್ಮತಿಸಿದರೂ, ಭುಜ ಅಥವಾ ಕುತ್ತಿಗೆಯ ಮೇಲಲ್ಲ ...... ಶೂದ್ರ ಶ್ರಮದ ಘನತೆಯನ್ನು ಎತ್ತಿ ಹಿಡಿದಾಗ ಅದರರ್ಥ ರಾಜಸಿಕ ಮತ್ತು ಸಾತ್ವಿಕ ಗುಣಗಳ ಬದಲಿಗೆ ತಾಮಸಿಕವನ್ನು ವೈಭವೀಕರಿಸುತ್ತಿದ್ದೇನಂತಲ್ಲ. ನಾನು ಹೇಳುವುದಿಷ್ಟೇ, ನಾವು 'ತಾಮಸ'ವನ್ನು ಭಾರತದಲ್ಲಿ ಸಾಕಷ್ಟು ಹೀನಾಯಗೊಳಿಸಿದ್ದೇವೆ. ಮತ್ತು ಅದನ್ನು ದ್ವೇಷಿಸಿ, ವಿರೋಧಿಸುತ್ತಲೇ ನಮ್ಮೊಳಗೆ ಅದನ್ನು ಭೀಕರವಾಗಿ ಬೆಳೆಸಿಕೊಂಡಿದ್ದೇವೆ. ನಾವು ತಾಮಸವನ್ನು ಬಳಸಿಕೊಳ್ಳುವ, ಅದರ ಗುಣಗಳನ್ನು ಕಂಡುಕೊಳ್ಳುವ ಕೆಲಸ ಯಾಕೆ ಮಾಡಬಾರದು? ಕೊಳೆತ ಗೊಬ್ಬರವನ್ನು ಉದ್ಯಾನವನಕ್ಕೆ ಉಪಯೋಗಿಸದೆ ಒಗೆದುಬಿಟ್ಟರೆ ಹೇಗೆ? ತಾಮಸವೆಂಬ ಇದ್ದಿಲು

ಇಲ್ಲದೆ ಬೆಂಕಿ ಮತ್ತು ಆವಿಯನ್ನು (ರಾಜಸ) ಮತ್ತು ಬೆಳಕನ್ನು (ಸಾತ್ವಿಕ) ಹುಟ್ಟಿಸಲು ಸಾಧ್ಯವಿಲ್ಲ.

ತಾಮಸ ಗುಣದ ಪ್ರಮಾಣದ ತಳಹದಿಯ ಮೇಲೆ ರಾಜಸ–ಅಗ್ನಿ ಮತ್ತು ಸತ್ವ–ಬೆಳಕು, ಇವುಗಳ ತೀವ್ರತೆ ಹಾಗೂ ಶಕ್ತಿ ಅವಲಂಬಿಸಿರುತ್ತದೆ. ಆಧುನಿಕ ಫ್ರೆನಾಲಜಿಯ (ಮನುಷ್ಯನ ಮೆದುಳಿನ ಆಕಾರ ಮತ್ತು ಅಳತೆಯ ಆಧಾರದ ಮೇಲೆ ಆತನ ಬುದ್ಧಿಮತ್ತೆಯನ್ನು ಅಳೆಯುವ ಅಧ್ಯಯನ) ತೀರ್ಮಾನಕ್ಕೆ ಹೊಂದುವಂತಹ ದೃಷ್ಟಿಕೋನವೆಂದರೆ ವ್ಯಕ್ತಿತ್ವದ ಶಕ್ತಿ ಮತ್ತು ಪರಾಕ್ರಮದ ಹಿರಿಮೆಗೆ ಮನುಷ್ಯನ ನೈತಿಕ ಮತ್ತು ಬೌದ್ಧಿಕ ಅಂಗಗಳು ಮಾತ್ರ ವಿಕಾಸವಾದರೆ ಸಾಲದು. ಅವು ಎಷ್ಟೇ ಅನುಕೂಲವಾಗಿದ್ದರೂ ಆತನಲ್ಲಿನ ತಾಮಸಿಕ ಶಕ್ತಿಗಳ ಭದ್ರ ತಳಪಾಯ ಅಗತ್ಯ. ಈ ಕಾರಣಕ್ಕಾಗಿಯೇ ದೇವಾಧಿದೇವ ಮಹಾದೇವವನ್ನು ಲಯದ, ತಾಮಸದ ಒಡೆಯನಂತೆ ಹಿಂದೂಗಳು ಚಿತ್ರಿಸಿದ್ದು.

ನಾವು ಭಾರತದ ಇತಿಹಾಸದ ಸಂದಿಗ್ಧ ಸಮಯದಲ್ಲಿ ಹುಟ್ಟಿದ್ದರೆ ಸೇವೆಯ ಅವಕಾಶಗಳು ವಿಪುಲವಾಗಿವೆಯೆಂದು ಕೃತಜ್ಞರಾಗಬೇಕು. ನಮ್ಮ ಕೆಲಸ ಹೆಚ್ಚು ವಿಭಿನ್ನವಾಗಿ, ಕಲಾತ್ಮಕವಾಗಿ, ಕ್ರಿಯಾತ್ಮಕವಾಗಿರಬೇಕು. ಯಾರು ಸ್ವಸ್ಥವಾಗಿ ನಿದ್ರಿಸುತ್ತಾರೋ ಅವರು ಸ್ವಸ್ಥವಾಗಿ ಏಳುತ್ತಾರೆ ಎಂಬೊಂದು ಮಾತಿದೆ. ಭಾರತ ದೀರ್ಘಾವಧಿಯ ನಿದ್ರೆಯಿಂದ ಈಗ ಎದ್ದಿದೆ. ಹೀಗಾಗಿ ಎಚ್ಚರ ಗಮನಾರ್ಹವಾಗಿರುತ್ತದೆ. ನಾವು ಭಾರತದ ಜನರಲ್ಲಿ ಜಾಗೃತಗೊಳಿಸಬೇಕಾಗಿರುವುದು ಗುಣಗ್ರಾಹಿತ್ವವನ್ನು, ಭ್ರಾತೃತ್ವದ ಭಾವನೆಯನ್ನು, ಸಂವಾದ ಮತ್ತು ಸಿದ್ಧಾಂತ ಸಮೀಕರಣದ ಪ್ರವೃತ್ತಿಯನ್ನು, ಕಾರ್ಯಗಳ ಸುಸಂಘಟನೆಯನ್ನು, ಮತ್ತು ದುಡಿಮೆಯ ಘನತೆಯನ್ನು ಹೊರತು, ಗುಣದೋಷ ವಿಮರ್ಶೆಯನ್ನಲ್ಲ.

ಛೆ! ಒಂದು ಪಂಗಡ ಇನ್ನೊಂದು ಪಂಗಡವನ್ನು ವಿಮರ್ಶಿಸುವುದರಲ್ಲಿ, ಟೀಕಿಸುವುದರಲ್ಲಿ ಈ ನೆಲದ ಉತ್ಸಾಹ, ಶಕ್ತಿಯೆಲ್ಲ ಎಷ್ಟು ಪೋಲಾಗಿ ಹೋಗುತ್ತಿದೆಯಲ್ಲ! ನಮ್ಮ ನಡುವಣ ಸಮಾನತೆಯ ಅಂಶಗಳನ್ನು ಗುರುತಿಸಿ ಅವುಗಳಿಗೆ ಹೆಚ್ಚು ಒತ್ತು ಕೊಡಲು ಪ್ರಯತ್ನಿಸೋಣ. ಸನಾತನ ಧರ್ಮ ಅರ್ಥವಾಗದ, ಆದರೆ ಆರ್ಯ ಸಮಾಜ ಒಪ್ಪುವ ಕೆಲ ಮಂದಿಯಿದ್ದಾರೆ. ಇನ್ನು ಕೆಲವರಿಗೆ ಬ್ರಹ್ಮ ಸಮಾಜ ಮಾತ್ರ ಒಪ್ಪಿಗೆಯಾಗುತ್ತದೆ. ಹಾಗೇ ವೈಷ್ಣವ ಧರ್ಮ ಕೂಡ. ನನ್ನ ಮತಾಭಿಪ್ರಾಯ ತರಬಹುದಾದ ಬಲ ಮತ್ತು ಸಂತೋಷದ ಗೊಡವೆಯೇ ಇಲ್ಲದವರಲ್ಲಿ ಹುಳುಕು ಹುಡುಕುವ ಅಧಿಕಾರ ನನಗೆಲ್ಲಿದೆ?

ಅವರು ಬರಲಿ. ಬೇಕಾದರೆ ಇರಲಿ, ಇಲ್ಲವೇ ಹೋಗಲಿ. ನಾನು ವಿಷಯಗಳನ್ನು ಹರಿಯಬಿಡುತ್ತೇನೆ, ಸುಮ್ಮನೆ ಹರಿಯಬಿಡುತ್ತೇನೆ. ಸಹಾನುಭೂತಿ ತೋರುವವರ ಮೇಲೆ ನಾನಾಗಲಿ ನೀವಾಗಲಿ ಏಕಸ್ವಾಮ್ಯ ಸಾಧಿಸಲು ಏಕೆ



ಪ್ರಯತ್ನಿಸಬೇಕು? ಸೇವೆ ಮಾಡುವುದಷ್ಟೇ ನನ್ನ ಅಧಿಕಾರ. ಎಲ್ಲರ, ಅಂದರೆ ಪ್ರೀತಿಸುವವರ ಹಾಗೂ ದ್ವೇಷಿಸುವವರ (ಅಂಥವರು ಇದ್ದರೆ) ಸೇವೆಯಲ್ಲಿ ನಿರತನಾಗಿರುವುದಷ್ಟೇ ನನ್ನ ಅಧಿಕಾರ. ಅಶಕ್ತ ಮತ್ತು ಸಣ್ಣತನ ತೋರುವ ಮಕ್ಕಳನ್ನು ತಾಯಿ ಬೇರೆ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುತ್ತಾಳಷ್ಟೆ? ಅಂಥವರೂ ದೇಶಕ್ಕೆ ಬೇಕಾಗುವವರೇ ತಾನೇ? ಬರೀ ಬಲಗಾಲಿನ ಆಧಾರದ ಮೇಲೆ ರಸ್ತೆಯಲ್ಲಿ ಕುಂಟಿಕೊಂಡು ಹೋಗಬೇಕಾದ ದಾರಿಹೋಕ ನಿಜಕ್ಕೂ ದುರದೃಷ್ಟವಂತ. ಎಲ್ಲವನ್ನೂ ದೇವರ ದೃಷ್ಟಿಯಿಂದ ಕಾಣಲು ಕಲಿಯುವುದೇ ನಿಜವಾದ ಶಿಕ್ಷಣ.

'ಒಂದು ಹನಿ ನೀರು ಶುದ್ಧ ಜಮುನೆಯಲ್ಲಿ
ಇನ್ನೊಂದು ಹೊಲಸು ಹನಿ ಹಾದಿಬದಿಯ ಹೊಂಡದಲ್ಲಿ
ಇವೆರಡೂ ಸೇರಿದಾಗ ಗಂಗೆಯಷ್ಟು
ಪವಿತ್ರವೇ ತಾನೇ ಎರಡೂನೂ.'

– ಸೂರದಾಸ

ನಮ್ಮ ವೈಯಕ್ತಿಕ ಮತ್ತು ಪ್ರಾದೇಶಿಕ ಧರ್ಮಗಳು ಯಾವತ್ತೂ ರಾಷ್ಟ್ರಧರ್ಮಕ್ಕಿಂತ ಮಿಗಿಲಾಗಿರಬಾರದು. ಈ ಕುರಿತು ಸಮತೆಯನ್ನು ಕಾಪಾಡುವುದರಿಂದಷ್ಟೇ ಪರಮ ಸುಖ ಲಭ್ಯವಾಗಬಲ್ಲದು.

ರಾಷ್ಟ್ರದ ಹಿತಕ್ಕಾಗಿ ಏನೇ ಮಾಡಿದರೂ ಅದು ಜಗದ ಶಕ್ತಿಗಳ, ದೇವರುಗಳ ಸೇವೆ ಮಾಡಿದಂತೆ. ಈ ರೀತಿಯ ತ್ಯಾಗ ಅಥವಾ ಯಜ್ಞವನ್ನು ಭಾರತವೆಂಬ ದೇವತೆಗೆ ಅರ್ಪಿಸಬೇಕು. ಇಂತಹ ಯಜ್ಞಗಳಿಗೆ ಸಂಬಂಧಿಸಿಯೇ 'ಗೀತೆ'ಯ ಈ ಶ್ಲೋಕವನ್ನು ಅರ್ಥೈಸಿಕೊಳ್ಳಬಹುದು:

'ಯಾಗದಲ್ಲಿ ಉಳಿದುದನ್ನಷ್ಟೇ ಸೇವಿಸುವ ಪ್ರಾಮಾಣಿಕರು ಎಲ್ಲ ಪಾಪಗಳಿಂದ ಮುಕ್ತರು. ಆದರೆ ತಮಗಾಗಿಯೇ ಆಹಾರ ಸಿದ್ಧಪಡಿಸಿಕೊಂಡು ತಿನ್ನುವ ಧರ್ಮ ಶ್ರದ್ಧೆಯಿಲ್ಲದವರು ತಿನ್ನುವುದು ಪಾಪವನ್ನೇ.'

ದೇವರನ್ನು ಸಾಕ್ಷಾತ್ಕರಿಸಿಕೊಳ್ಳಲು ಸ್ವಾಸಕ್ತಿಯನ್ನು ಸಂಪೂರ್ಣವಾಗಿ ತ್ಯಜಿಸಿ, ಭಾರತಮಾತೆಯ ಮಹಾನ್ ಆತ್ಮದೊಂದಿಗೆ ನಮ್ಮ ಯಃಕಶ್ಚಿತ್ ಆತ್ಮವನ್ನು ಒಂದಾಗಿಸುವ 'ಸಂನ್ಯಾಸ ಮನೋಭಾವ'ವಿರಬೇಕು. ದೇವರ ಅಥವಾ ಪರಮಾನಂದದ ಸಾಕ್ಷಾತ್ಕಾರವಾಗಬೇಕಾದರೆ ರಾಷ್ಟ್ರದ ಏಳಿಗೆಯ ಚಿಂತನೆಗಾಗಿ ಬುದ್ಧಿಮತ್ತೆಯನ್ನು ಮುಡಿಪಾಗಿಡುವ 'ಬ್ರಾಹ್ಮಣ ಚೈತನ್ಯ'ವಿರಬೇಕು. ಯಾವ ಘಳಿಗೆಯಲ್ಲಾದರೂ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡುವ 'ಕ್ಷತ್ರಿಯ ಚೈತನ್ಯ'ವಿರಬೇಕು. ನಿಮ್ಮ ಆಸ್ತಿಯನ್ನು ದೇಶದ ಪರವಾಗಿಯಷ್ಟೇ ಕಾಪಾಡುವ 'ವೈಶ್ಯ ಚೈತನ್ಯ'ವಿರಬೇಕು.

ಆದರೆ 'ಪರಮಾನಂದ' ಮತ್ತು 'ರಾಮ'ನನ್ನು ಆ ಜಗತ್ತಿನಲ್ಲಿ ಅಥವಾ ಇಲ್ಲಿ ಅರಿಯಬೇಕಾದರೆ, ಅಮೂರ್ತ ವ್ಯಕ್ತಿನಿಷ್ಠ ಧರ್ಮವನ್ನು ಜೀವಂತ, ಮೂರ್ತ ಮತ್ತು ವಸ್ತುನಿಷ್ಠಗೊಳಿಸಬೇಕಾದರೆ, ಈ ಬಗೆಯ ಸಂನ್ಯಾಸ, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಮನೋಭಾವಗಳ ಪರಾಕ್ರಮವನ್ನು ಒಂದು ಕಾಲದಲ್ಲಿ ಪಾವನ ಶೂದ್ರರಿಗೆ ಮೀಸಲಾಗಿರಿಸಿದ್ದ ದೈಹಿಕ ಶ್ರಮದ ಮೂಲಕ ತೋರಬೇಕು. ಸಂನ್ಯಾಸ ಮನೋಭಾವ ಮತ್ತು ಶೂದ್ರ ಕೈಗಳ ಸಮ್ಮಿಲನವಾಗಬೇಕು. ಇವತ್ತು ದಾರಿ ಇದೊಂದೇ.... ಏಳಿ, ಎದ್ದೇಳಿ!

ಇಡಿಯ ವಿಶ್ವದ ಏಕಮೇವ ಬ್ರಾಹ್ಮಣಭೂಮಿಯಾದ ಭಾರತಕ್ಕೆ ಈ ಧರ್ಮವನ್ನು ಇವತ್ತು ಪಾಶ್ಚಿಮಾತ್ಯ ದೇಶಗಳು ತಮ್ಮ ಆಚರಣೆಯಿಂದ ಹೇಳಿ ಕೊಡುತ್ತಿವೆ.

ತನ್ನ ತಾಯಿಯೆಡೆಗೆ ಇರುವ ಬಾಧ್ಯತೆಗಳ (ಕೌಟುಂಬಿಕ ಧರ್ಮ) ಆಧಾರದ ಮೇಲೆ ಜಪಾನೀ ಯುವಕನೊಬ್ಬ ಸೈನ್ಯಕ್ಕೆ ನಿರಾಕರಣೆಯಾದರೆ ಆ ತಾಯಿ ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಉನ್ನತ ರಾಷ್ಟ್ರಧರ್ಮಕ್ಕಾಗಿ ಕೆಳಸ್ತರದ ಕೌಟುಂಬಿಕ ಧರ್ಮವನ್ನು ತ್ಯಾಗ ಮಾಡುತ್ತಾಳೆ.

ಆ ಆದರ್ಶ ಭವ್ಯ ಗುರು ಗೋವಿಂದಸಿಂಗರು ರಾಷ್ಟ್ರ ಧರ್ಮಕ್ಕಾಗಿ ಮಾಡಿದ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ಧರ್ಮದ ತ್ಯಾಗವನ್ನು ಇನ್ಯಾವುದೇ ಸಾಹಸೀ ಕಾರ್ಯಗಳಿಗೆ  ಹೋಲಿಸಲಾದೀತೇ?

ಜನರು ಶಕ್ತಿ, ಅಧಿಕಾರಕ್ಕಾಗಿ ಹಂಬಲಿಸುತ್ತಾರೆ. ಸ್ವ ಮತ್ತು ರಾಷ್ಟ್ರ ಭಾವಗಳು ಒಂದಾದ ಘಳಿಗೆಯಲ್ಲಿ ಸೀಮಾತೀತ ಶಕ್ತಿ ನಮ್ಮೊಳಗೆ ಆವಿರ್ಭವಿಸುತ್ತದೆ.

ಈ ಭಾವನೆಯನ್ನು ಇಸ್ಲಾಮಿನ ಪ್ರವಾದಿಯ ಸುಂದರ ಶಬ್ದಗಳಲ್ಲಿ ಉದಾಹರಿಸಿ ಮುಗಿಸೋಣ,

"ಬಲಕ್ಕೆ ಸೂರ್ಯ, ಎಡಕ್ಕೆ ಚಂದ್ರ ನಿಂತು
ಹಿನ್ನಡೆ ಎಂದರೂ ನಾನು ಕೇಳಲಾರೆ."

* * * *



## ೭. ಭಾರತದ ಸದ್ಯದ ಅಗತ್ಯಗಳು

ಅಸ್ಥಿರ ಹೊಯ್ದಾಟದಿಂದ ಜನರನ್ನು ಮೇಲೆತ್ತುವುದು, ಸುತ್ತಣ ಎಲ್ಲದರೊಂದಿಗೂ ಸ್ವಾಭಾವಿಕ ಘನತೆ, ಏಕತೆ ಮತ್ತು ಸಾಂಗತ್ಯವನ್ನು ಕಾಣುವಂತೆ ಮಾಡುವುದು, ಸಹಜ, ಉಪಯುಕ್ತ ಭಿನ್ನತೆಯ ಮೂಲಕ ರಾಷ್ಟ್ರೈಕ್ಯದ ದೃಢ ನೆಲೆಯನ್ನು ಸಾಧಿಸುವುದು – ಇವೆಲ್ಲ ರಾಮನ ಗ್ರಹಿಕೆಯ ಪ್ರಕಾರ ಕ್ರಿಯಾತ್ಮಕ ವೇದಾಂತದ ಗುರಿ. ಈ ವೇದಾಂತದ ಅಗತ್ಯ ಎಲ್ಲಿಲ್ಲ ಹೇಳಿ? ಆದರೆ ಭಾರತಕ್ಕೆ ಇದರ ಅಗತ್ಯ ಅತ್ಯಂತವಾಗಿದೆ.

ಭಾರತದ ಇಂದಿನ ಅವಶ್ಯಕತೆಗಾಗಿ ಪ್ರೀತಿ ಮತ್ತು ಬೆಳಕನ್ನು ಹರಡುವ ಉದ್ದೇಶದಿಂದ 'ಜೀವನ ಸಂಸ್ಥೆ' ಎಂದು ಕರೆಯಬಹುದಾದ ಸಂಸ್ಥೆಯೊಂದನ್ನು ಆರಂಭಿಸಬೇಕೆಂಬುದು ರಾಮನ ಸಲಹೆ.

ವಿವರಗಳನ್ನು ಹೊರತುಪಡಿಸಿ ಇದರ ಸ್ಥೂಲ ರೂಪುರೇಷೆ ಹೀಗಿದೆ:

೧. ಈ ಸಂಸ್ಥೆ ಮೊತ್ತಮೊದಲಿಗೆ ಧರ್ಮ ಮತ್ತು ತರ್ಕಶಾಸ್ತ್ರದ ನಡುವಿನ ತೌಲನಿಕ ಅಧ್ಯಯನವನ್ನು ಕೈಗೆತ್ತಿಕೊಳ್ಳುತ್ತದೆ. ಎಂದಿನಿಂದಲೂ ಘರ್ಷಣೆಯ ಸಂಬಂಧ ಹೊಂದಿರುವ ಧರ್ಮ ಮತ್ತು ತರ್ಕವನ್ನು ನಿರ್ಮಮಕಾರದಿಂದ, ಶಾಂತಚಿತ್ತರಾಗಿ ಒಬ್ಬ ನಿಷ್ಪಕ್ಷಪಾತಿ, ಅಕ್ಷುಬ್ಧ ನ್ಯಾಯಮೂರ್ತಿಯಂತೆ ಅಥವಾ ಪ್ರಶಾಂತ ಸಾಕ್ಷಿಯಂತೆ ಅಧ್ಯಯನ ನಡೆಸಲು ಅಭ್ಯರ್ಥಿಗಳಿಗೆ ಅನುವು ಮಾಡಿಕೊಡುತ್ತದೆ. ತನ್ನ ಸಾಮರ್ಥ್ಯಕ್ಕನುಗುಣವಾಗಿ ಪ್ರತಿ ವಿದ್ಯಾರ್ಥಿಯೂ ಧಾರ್ಮಿಕ ಅಥವಾ ತರ್ಕಶಾಸ್ತ್ರದ ಪುಸ್ತಕಗಳನ್ನು ತನ್ನಿಷ್ಟಕ್ಕೆ (ಅಗತ್ಯವಿದ್ದಾಗಲೆಲ್ಲ ಪ್ರಾಧ್ಯಾಪಕರ ಮಾರ್ಗದರ್ಶನವಿದ್ದೇ ಇರುತ್ತದೆ) ಅಧ್ಯಯನ ನಡೆಸಬೇಕಾಗುತ್ತದೆ. ಸಂಜೆಯ ಸಭೆಯಲ್ಲಿ ಅಂದು ಓದಿದ ಮತ್ತು ಓದುವಾಗ ತನಗೇ ಹೇಳಿಕೊಂಡ ಸಲಹೆಗಳ ವರದಿಯೊಂದನ್ನು ನೀಡಬೇಕಾಗುತ್ತದೆ. ಅಂಥ ಸಂಕ್ಷಿಪ್ತ ವರದಿಗಳನ್ನು ಆಲಿಸಿದ ತರುವಾಯ ಪ್ರತಿ ರಾತ್ರಿಯೂ ರಾಮನ ಮಧ್ಯಸ್ಥಿಕೆಯಲ್ಲಿ ಸಂಸ್ಥೆಯ ವಿವಿಧ ಸದಸ್ಯರಿಂದ ಚರ್ಚಿಸಲ್ಪಟ್ಟ ವಿಷಯಗಳಲ್ಲಿ ಸಾಮರಸ್ಯ ತರುವ ಉದ್ದೇಶದಿಂದ ಆರೋಗ್ಯಪೂರ್ಣ, ಗೌರವಯುತ ಸಂವಾದ ನಡೆಯುತ್ತದೆ. ಹೀಗೆ ಪ್ರತಿಯೊಬ್ಬರೂ ತಮ್ಮ ಬೌದ್ಧಿಕ ಶ್ರಮದ ಫಲವನ್ನು ಎಲ್ಲರ ಮುಂದಿಟ್ಟು ಹಂಚಿಕೊಳ್ಳುವಾಗ ಪರಸ್ಪರ ಸಾಮರಸ್ಯ, ಗ್ರಹಿಕೆ ಮತ್ತು ಪ್ರೇಮ ವೃದ್ಧಿಸುತ್ತದೆ.

ಸದ್ಯದ ಅವಶ್ಯಕತೆಯಾಗಿರುವ ಈ ಬಗೆಯ ವೈಚಾರಿಕ, ಸಾಮಾಜಿಕ ಸಹಪ್ರಯತ್ನ ಮಾನಸಿಕ ಕ್ರಿಯಾದಕ್ಷತೆಯನ್ನು ದ್ವಿಗುಣಗೊಳಿಸಿ ನಿಜ ಸಂಸ್ಕೃತಿಯನ್ನು ಕಲಿಸಬೇಕು.

೨. ಭಾರತದಲ್ಲಿ ಅತಿ ಹೆಚ್ಚು ಬೇಡಿಕೆಯಲ್ಲಿರುವ ಧರ್ಮಶಾಸ್ತ್ರ ಮತ್ತು ತರ್ಕಶಾಸ್ತ್ರಗಳ ಮೂಲಕ ನವ ವಿದ್ಯಾರ್ಥಿಗಳಿಗೆ ಸಹಕಾರಿ ಶಿಕ್ಷಣದ ಸವಿಯನ್ನು ಪರಿಚಯಿಸಿದ ನಂತರ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ವಿದ್ಯುಚ್ಛಕ್ತಿ, ಭೂಶಾಸ್ತ್ರ, ರಸಾಯನಶಾಸ್ತ್ರ, ಖಗೋಳಶಾಸ್ತ್ರ ಮುಂತಾದುವುಗಳನ್ನು ಅಧ್ಯಯನ ಯೋಜನೆಯಲ್ಲಿ ಸೇರ್ಪಡೆಗೊಳಿಸಲಾಗುವುದು. ವಿವಿಧ ವಿಜ್ಞಾನ ಪಾಠಕ್ರಮಗಳನ್ನು ಪರಿಚಯಿಸುವುದರೊಂದಿಗೆ ಗ್ರಂಥಾಲಯ, ಪ್ರಯೋಗಾಲಯ, ವೀಕ್ಷಣಾಲಯ ಇತ್ಯಾದಿಗಳನ್ನು ಖಂಡಿತವಾಗಿ ಬೆಳೆಸಬೇಕು.

ಕಣ್ಣಿಗೆ ರಾಚುವಂತಿರುವ ಕೆಲ ಧಾರ್ಮಿಕ ಅಪಕಲ್ಪನೆಗಳನ್ನು ಹೋಗಲಾಡಿಸಿ ಜನರ ಶಕ್ತಿಗಳನ್ನು ಹೆಚ್ಚು ವಿಚಾರಾತ್ಮಕ ಮತ್ತು ಉಪಯುಕ್ತವನ್ನಾಗಿಸುವ ಉದ್ದೇಶದಿಂದ ಈ ಸಂಸ್ಥೆ ವಿಜ್ಞಾನವನ್ನು ಜನಪ್ರಿಯಗೊಳಿಸಲು ಯತ್ನಿಸುತ್ತದೆ. ಮೇಲಾಗಿ, ಈ ಸಂಸ್ಥೆಯಲ್ಲಿ ವಿಜ್ಞಾನ ಕಲಿಕೆಯೆಂಬುದು ಧಾರ್ಮಿಕ ಶ್ರದ್ಧೆಯೋಪಾದಿಯಲ್ಲಿರಬೇಕು. ವಿಜ್ಞಾನ, ಕಲೆಗಳ ಜೊತೆಗೆ ಧರ್ಮಾತೀತವೆಂದು ಕಾಣುವಂತಹ ಇತರ ಅಧ್ಯಯನಗಳನ್ನು, ವೇದಾಂತದ ಸತ್ವವನ್ನು ವ್ಯವಹಾರದಲ್ಲಿ ಅನ್ವಯಿಸುವ ಬಗೆಯನ್ನು, ಕಲಿಯುವ ಅಥವಾ ಆನ್ವಯಿಕ ವೇದಾಂತವನ್ನು ಅರ್ಜನೆ ಮಾಡಿಕೊಳ್ಳುವ ದೃಷ್ಟಿಯಿಂದ ಕೈಗೊಳ್ಳಲಾಗುತ್ತದೆ.

ಮಹತ್ವದ ಸಹಜವಾದಿ ಅಗಾಸಿಯ ಕುರಿತು ಹೇಳುವವರು ಆತನಿಗೆ ಹೇಗೆ ಪ್ರಯೋಗಾಲಯವೂ ಇಗರ್ಜಿಯಷ್ಟೇ, ಮತ್ತು ಭೌತಿಕ ಸಂಗತಿಯೂ ನೈತಿಕ ತತ್ವದಷ್ಟೇ ಪವಿತ್ರವಾಗಿತ್ತು ಎಂಬುದನ್ನು ತಿಳಿಸುತ್ತಾರೆ. ಪ್ರಕೃತಿಯ ವಿವಿಧ ಜೀವಸಂಕುಲಗಳ ಸಾಮ್ಯಗಳನ್ನು ಗುರುತಿಸುವುದೆಂದರೆ ಆತನಿಗೆ "ದೇವರ ಚಿಂತನೆಗಳನ್ನು ಮರುಚಿಂತಿಸಿದಂತೆ".

೩. ಕಾಲಕ್ರಮೇಣ ಸಂಸ್ಥೆಯ ಕಾರ್ಯವ್ಯಾಪ್ತಿಯನ್ನು ಮೂರನೇ ವಿಭಾಗಕ್ಕೆ, ಅಂದರೆ ಔದ್ಯಮಿಕ ಕಲೆಗೆ ವಿಸ್ತರಿಸಲಾಗುತ್ತದೆ. ಭಾರತದಲ್ಲಿ ಇದರ ಅಗತ್ಯದ ಬಗ್ಗೆ ಹೇಳಬೇಕಾದ್ದೇನೂ ಇಲ್ಲ.

ಅಮೆರಿಕಾ ಮತ್ತು ಯೂರೋಪಿನ ಕೆಲ ದೊಡ್ಡ ವಿಶ್ವವಿದ್ಯಾಲಯಗಳೆಲ್ಲ (ಉದಾಹರಣೆಗೆ ಯೇಲ್, ಹಾರ್ವರ್ಡ್, ಸ್ಟ್ಯಾನ್ ಫೋರ್ಡ್, ಶಿಕಾಗೋ) ಖಾಸಗಿ ಆಡಳಿತದಲ್ಲಿವೆ. ಭಾರತದ ಜನರು ತಮ್ಮ ವೈಯಕ್ತಿಕ ಅಗತ್ಯಗಳನ್ನು ಪರಿಗಣಿಸದೇ ಶಿಕ್ಷಣಕ್ಕಾಗಿ ಇನ್ನೂ ಸರ್ಕಾರಿ ಮಾದರಿಗಳನ್ನೇ ಅವಲಂಬಿಸಿರುವುದು ವಿಷಾದನೀಯ.



ರಾಮ ಪ್ರಸ್ತಾಪಿಸಿದ 'ಜೀವನ ಸಂಸ್ಥೆ'ಯಲ್ಲಿ ಸಂಪ್ರದಾಯವಾದಿ ಮತ್ತು ಸಂಪ್ರದಾಯ ವಿರೋಧಿಗಳೀರ್ವರ ಬರಹಗಳನ್ನೂ ವೈಜ್ಞಾನಿಕ ಸಮಚಿತ್ತತೆಯಿಂದ ಸ್ವಾಗತಿಸಲಾಗುತ್ತದೆ. "ಸತ್ಯ, ಸಂಪೂರ್ಣ ಸತ್ಯ ಮತ್ತು ಸತ್ಯವಲ್ಲದೇ ಬೇರೊಂದಿಲ್ಲ" ಎಂಬುದು ಸಂಸ್ಥೆಯ ಧ್ಯೇಯವಾಕ್ಯವಾಗಲಿದೆ.

* * * *

# ೮. ಭಾರತದ ಭವಿಷ್ಯ

ಆನುವಂಶಿಕತೆ ಮತ್ತು ರೂಪಾಂತರದ ತತ್ವಗಳನ್ನು ಆಧರಿಸಿ ಜೀವನ ವಿಕಾಸ ಹೊಂದುತ್ತದೆ. ಕೆಳವರ್ಗದ ಜೀವಸಂಕುಲದಲ್ಲಿ ಅನುವಂಶೀಯತೆಯ ನಿಯಮದ್ದೇ ಆಧಿಪತ್ಯ. ರೂಪಾಂತರ ತತ್ವ ಅಥವಾ ಶಿಕ್ಷಣವೆಂಬ ಮೂಲ ತತ್ವದ ಪ್ರಾಧಾನ್ಯ ಪ್ರಾಣಿ, ಸಸ್ಯಗಳಿಂದ ಮನುಷ್ಯನನ್ನು ಭಿನ್ನವಾಗಿಸುತ್ತದೆ. ಒಂದು ಮುದ್ದಾದ ಮುಗು ಪುಟ್ಟ ನಾಯಿಮರಿಯೊಂದರಷ್ಟೇ ಬುದ್ಧಿಹೀನ ಮತ್ತು ತಿಳಿಗೇಡಿ. ಅಲ್ಲಲ್ಲ, ನಾಯಿಮರಿ ಹಲವೊಮ್ಮೆ ಪುಟ್ಟ ಮಾನವನಿಗಿಂತ ಚುರುಕು ಬುದ್ಧಿಯದು. ವ್ಯತ್ಯಾಸವೆಂದರೆ, ನಾಯಿಮರಿ ಮತ್ತು ಗಿಳಿ ಜನನದ ಸಮಯದಲ್ಲೇ ತನ್ನ ಪರಿಪೂರ್ಣತೆಗೆ ಅಗತ್ಯವಾದುದನ್ನೆಲ್ಲಾ ಆನುವಂಶಿಕವಾಗಿ ಪಡೆದಿರುತ್ತದೆ. ಆದರೆ ರೂಪಾಂತರ ಮತ್ತು ಶಿಕ್ಷಣದ ಮೂಲಕ ಮಗು ಇಡಿಯ ಪ್ರಪಂಚವನ್ನು ತನ್ನ ತೆಕ್ಕೆಯಲ್ಲಿ ತಂದುಕೊಳ್ಳುತ್ತದೆ, ತಂದುಕೊಳ್ಳಬಹುದು.

ನನ್ನ ಪ್ರಿಯ ಹಿಂದುಗಳೇ, ಬದಲಾವಣೆ ಅಥವಾ ಹೊಂದಿಕೆಗೆ ಮುಖ ತಿರುವುತ್ತಾ, ಪುರಾತನ ಸಂಪ್ರದಾಯ ಮತ್ತು ಆನುವಂಶಿಕತೆಗೆ ಅತಿಯಾದ ಪ್ರಾಶಸ್ತ್ಯ ನೀಡುತ್ತಾ ದಯಮಾಡಿ ನಿಮ್ಮನ್ನು ನೀವೇ ಮಾನವನ ಸ್ತರದಿಂದ ಕೆಳಗೆಳೆದುಕೊಳ್ಳಬೇಡಿ.

ನೀವು ಕಾಲ ಮತ್ತು ಸ್ಥಳ ಎರಡರಲ್ಲೂ ಬದುಕುತ್ತೀರಿ. ಭಾರತದ ಪ್ರಾಚೀನ ಋಷಿಗಳ ಸಂತತಿ ನೀವಾಗಿದ್ದರೂ ಅವರ ಕಾಲದಲ್ಲಿ ನೀವು ಬದುಕುತ್ತಿಲ್ಲವಷ್ಟೇ? ಸ್ಟೀಮ್ ಎಂಜಿನ್, ಸ್ಟೀಮ್ ಶಿಪ್, ಟೆಲಿಗ್ರಾಫ್ ಮುಂತಾದುವೆಲ್ಲ ನಿಮ್ಮ ಬಾಗಿಲಲ್ಲಿವೆ. ಪ್ರಸ್ತುತ ಜಗತ್ತಿನಿಂದ ನಿಮ್ಮನ್ನು ಕಡಿದುಕೊಳ್ಳಲಾಗದು. ನಿಮ್ಮ ಹೋರಾಟವೇನಿದ್ದರೂ ಇಪ್ಪತ್ತನೆಯ ಶತಮಾನದ ವಿಜ್ಞಾನಿಗಳೊಂದಿಗೆ, ಕಲಾವಿದರೊಂದಿಗೆ, ಯೂರೋಪು ಮತ್ತು ಅಮೆರಿಕಾದ ಕೆಲಸಗಾರರೊಂದಿಗೆ. ಇದರಿಂದ ಹೊರಬರಲು ಸಾಧ್ಯವಿಲ್ಲ. ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯುತ್ತದೆ, ಈ ಯುಗದ ಪರಿವರ್ತಿತ ಸಂದರ್ಭಕ್ಕೆ ಅನುಗುಣವಾಗಿ ನಿಮ್ಮನ್ನು ಹೊಂದಿಸಿಕೊಳ್ಳದಿದ್ದರೆ ಉಳಿಗಾಲವಿಲ್ಲ. ನಿಮ್ಮದೇ ನೆಲದ ಪ್ರಾಚೀನ ಜ್ಯೋತಿಯೂ ಆಗಿರುವ ನವ ಜ್ಯೋತಿಯನ್ನು ಅಂತರ್ಗತಗೊಳಿಸಿಕೊಳ್ಳಲು ನೀವು ತಯಾರಿಲ್ಲವೆಂತಾದರೆ ಹೋಗಿ ನಿಮ್ಮ ಪೂರ್ವಜರಿರುವ ಪಿತೃಲೋಕದಲ್ಲಿ ಬದುಕಿ! ಇಲ್ಲಿ ಉಳಿಯುವುದೇಕೆ! ಶುಭ ವಿದಾಯ ನಿಮಗೆ!



ನೀವು ಅರಾಷ್ಟ್ರೀಕರಣಗೊಳ್ಳಬೇಕೆಂಬುದು ರಾಮನ ಇಂಗಿತವಲ್ಲ. ತನ್ನ ಸುತ್ತಣ ಗಾಳಿ, ನೀರು, ಗೊಬ್ಬರ ಮತ್ತು ಭೂಮಿಯ ಸತ್ವವನ್ನು ರಕ್ತಗತಗೊಳಿಸಿಕೊಂಡು ಗಿಡ ಬೆಳೆಯುತ್ತದೆ.; ಅದರಿಂದ ಗಿಡ ಗಾಳಿ, ನೀರು ಅಥವಾ ಭೂಮಿ ಆಗಿಬಿಡುತ್ತದೆಯೇ? ಇಲ್ಲವಲ್ಲ. ಹಾಗೇ ನೀವೂ ಹೊರಗಿನ ವಸ್ತು ವಿಷಯಗಳನ್ನು ಗ್ರಹಿಸಿ, ಜೀರ್ಣಿಸಿಕೊಂಡು 'ಶ್ರುತಿ'ಯಲ್ಲಿ ಹೇಳಿರುವಂತಹ ಅಪ್ಪಟ ಜೀವನ ತತ್ವವನ್ನು ಹೃದಯದಲ್ಲಿ ಕಾಪಿಟ್ಟುಕೊಂಡು ಬೆಳೆಯಬೇಕು, ಅರಳಬೇಕು.

ದೇಶದ ಸಂಪನ್ಮೂಲಗಳನ್ನು ಬಳಸಲು ಸಾಧ್ಯವಾಗುವಂತೆ ಮಾಡುವುದು ಶಿಕ್ಷಣದ ಉದ್ದೇಶವಾಗಬೇಕು. ಯೋಗ್ಯ ಶಿಕ್ಷಣದಿಂದ ಜನರು ಭೂಮಿಯನ್ನು ಮತ್ತಷ್ಟು ಫಲವತ್ತಾಗುವಂತೆ ಮಾಡುವಂತಿರಬೇಕು, ಗಣಿಗಳ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವಂತಿರಬೇಕು, ಉದ್ಯಮಗಳಲ್ಲಿ ಇನ್ನಷ್ಟು ಏಳಿಗೆ ಸಾಧಿಸುವಂತಿರಬೇಕು, ಶರೀರ ಹೆಚ್ಚು ಚುರುಕಾಗುವಂತಾಗಬೇಕು, ಮನಸ್ಸು ಹೆಚ್ಚು ಸ್ವೋಪಜ್ಞವಾಗುವಂತಿರಬೇಕು. ಹೃದಯ ಪರಿಶುದ್ಧವಾಗುವಂತಾಗಬೇಕು. ಉದ್ಯಮಗಳು ವೈವಿಧ್ಯ ಹೊಂದುವಂತಾಗಬೇಕು ಮತ್ತು ರಾಷ್ಟ್ರ ಏಕತೆ ಕಾಣಬೇಕು. ನಮ್ಮ ಬುದ್ಧಿಮತ್ತೆಯನ್ನು, ಕಲಿಕೆಯನ್ನು ಪ್ರದರ್ಶಿಸುವುದಕ್ಕಾಗಿ ಉದ್ದುದ್ದ ಸಾಲುಗಳನ್ನು ಉದ್ಧರಿಸುವುದು, ಪ್ರಾಚೀನ ಗ್ರಂಥಗಳ ಅರ್ಥವನ್ನು ಅಪಭ್ರಂಶಗೊಳಿಸುವ ನಿರರ್ಥಕ ವಾಗ್ವಾದ ಮಾಡುವುದು, ನಾವು ಬದುಕಿನಲ್ಲೆಂದೂ ಉಪಯೋಗಿಸದಂತಹ ವಿಷಯಗಳನ್ನು ಅಭ್ಯಸಿಸುವುದು, ಇವು ಶಿಕ್ಷಣವಲ್ಲ. ಬದುಕಿನಲ್ಲಿ ಅಳವಡಿಸಿ ಬಳಸಲಾಗದಂತಹ ಜ್ಞಾನವನ್ನು ಗಳಿಸುವುದೆಂದರೆ ಆಧ್ಯಾತ್ಮಿಕ ಮಲಬದ್ಧತೆ ಅಥವಾ ಮಾನಸಿಕ ಖಿನ್ನತೆಗೆ ಒಳಗಾದಂತೆ!

ಮೇಲ್ನೋಟದ ಎಲ್ಲ ಕಟು, ಆದರೆ ನಿರ್ಜೀವ ವಿರೋಧಗಳ ಹೊರತಾಗಿಯೂ ಹಿಂದೂಗಳು ಕ್ರಮೇಣ ಸೂಕ್ತ ಶಿಕ್ಷಣಗಳನ್ನು ಗಳಿಸುತ್ತಿದ್ದಾರೆ, ಅಗತ್ಯ ಹೊಂದಾಣಿಕೆಯನ್ನು ತೋರುತ್ತಿದ್ದಾರೆ ಎಂಬುದು ಸಮಾಧಾನದ ಸಂಗತಿ. ಗತಕಾಲಗಳ ಸಾಮಾಜಿಕ ಕಾನೂನುಗಳ ಕಾಠಿಣ್ಯ ಕ್ಷೀಣಿಸುತ್ತಿದೆ, ಜಾತಿ ಪದ್ಧತಿ ತನ್ನ ಸಹಜ ಅನುಪಾತಕ್ಕೆ ಮರಳುತ್ತಿದೆ. 'ಪಾಶ್ಚಿಮಾತ್ಯ ವಿಜ್ಞಾನ'ಕ್ಕೆ ಅಂಜಿಕೊಳ್ಳದೆ ಇವತ್ತು ಹಿಂದೂಗಳು ತಮ್ಮ ನೆಲದ 'ಬ್ರಹ್ಮ ವಿದ್ಯೆ (ಶ್ರುತಿ)'ಗೆ ಪರಮಾಪ್ತ ಸಂಗಾತಿಯಾಗಿ ಅದನ್ನು ಆಹ್ವಾನಿಸುತ್ತಿದ್ದಾರೆ.

ಭಾರತದ ಸಾಧುಗಳು ಈ ದೇಶಕ್ಕೇ ವಿಶಿಷ್ಟವಾದ ಅಭೂತಪೂರ್ವ ವ್ಯಕ್ತಿಗಳು. ನಿಂತ ನೀರಿನ ಮೇಲೆ ಹೇಗೆ ಹಾವಸೆ ಹರಡಿಕೊಳ್ಳುತ್ತದೋ ಹಾಗೇ ಇಂಡಿಯಾದ ಉದ್ದಗಲಕ್ಕೂ ಈಗಾಗಲೇ ಐವತ್ತೆರಡು ಲಕ್ಷ ಸಾಧುಗಳು ಪಸರಿಸಿಕೊಂಡಿರಬಹುದು. ಅವರಲ್ಲಿ ಕೆಲವರು ನಿಜಕ್ಕೂ ಸುಂದರ ಕಮಲಗಳು–ಸರೋವರದ ವೈಭವ! ಆದರೆ

ಬಹುತೇಕರು ಅನಾರೋಗ್ಯಕಾರಿ ಕೊಳಚೆಯಂತೆ. ನೀರು ಹರಿಯತೊಡಗಲಿ, ಜನರ ಜೀವನ ಮುನ್ನಡೆಯಲಿ. ಕೊಳಚೆ ತನ್ನಿಂತಾನೇ ಕೊಚ್ಚಿಹೋಗುತ್ತದೆ. ಅದರಲ್ಲಿ ಕೆಲವು ಭಾರತದ ಇತಿಹಾಸದ ಕರಾಳ ಯುಗಗಳ ಪ್ರತಿಫಲ. ಆದರೆ ಈಗ ಸುಧಾರಣೆಯ ಗಾಳಿ ಎಲ್ಲೆಲ್ಲೂ ಬೀಸುತ್ತಿದೆ. ಅದು ಗೃಹಸ್ಥರ ಭಾವನೆ ಮತ್ತು ಅಭಿರುಚಿಗಳನ್ನಷ್ಟೇ ಬದಲಿಸುತ್ತಿಲ್ಲ; ಸಾಧುಗಳ ಮೇಲೂ ಪ್ರಭಾವ ಬೀರುತ್ತಿದೆ. ರಾಷ್ಟ್ರೀಯತೆಯ ವೃಕ್ಷಕ್ಕೆ ಬಂದಳಿಕೆಯಾಗುಳಿಯದೆ ತಮ್ಮ ದೇಹ ಮನಸ್ಸುಗಳನ್ನು ಈ ವೃಕ್ಷಕ್ಕೆ ಗೊಬ್ಬರವಾಗಿ ಉಪಯೋಗಿಸುವ ಹಂಬಲ ಹೊತ್ತ ಹಲವು ಉತ್ಸಾಹಿ ಸಾಧುಗಳು ಹುಟ್ಟಿಕೊಳ್ಳುತ್ತಿದ್ದಾರೆ.

ಲಕ್ಷಾಂತರ ವಿದ್ಯಾರ್ಥಿಗಳಿಂದ ಪಠನವಾಗುತ್ತಿದ್ದ 'ಗೀತೆ'ಯ ಶ್ಲೋಕಗಳಲ್ಲಿ ಸಾರಿದ ಕರ್ಮ ಪ್ರಜ್ಞೆ ಮತ್ತು ನಿಷ್ಕಾಮ ಕರ್ಮವೆಂಬ ಧರ್ಮ ಇವತ್ತು ಶ್ರೀಕೃಷ್ಣನ ನಾಡಿನಲ್ಲಿ ಹೆಚ್ಚೂ ಕಡಿಮೆ ಕ್ರಿಯಾರೂಪಕ್ಕಿಳಿಯುತ್ತಿದೆ.

'ಕರ್ಮದಲ್ಲಿ ಜೀವಿಸು! ದುಡಿ!
ನಿನ್ನ ಕ್ರಿಯೆಗಳೇ ಧರ್ಮವಾಗಲಿ!
ಆತ್ಮವನ್ನು ಬದಿಗಿರಿಸು!
ಲಾಭ ಮೌಲ್ಯ ಗಳಿಸುತ್ತಾ
ಒಳಿತಿಗೂ ಕೆಡುಕಿಗೂ ಸಮಾನವಾಗು;
ಸಮಚಿತ್ತತೆಯೇ ಯೋಗ, ಅದೇ ಧರ್ಮ!'

ಸಾಮಾನ್ಯರೂ, ಸಾಧುಗಳೂ ಪಾಲಿಸಿಕೊಂಡು ಬರಬಹುದಾದಂಥದು ಗಾಢಭಕ್ತಿ ಮತ್ತು ಸೂಕ್ಷ್ಮ ವಿವೇಚನೆ. ಭಾರತದ ಆಂತರಿಕ ಮತ್ತು ಬಾಹ್ಯ, ಪ್ರಾಚೀನ ಮತ್ತು ಆಧುನಿಕ ಸಂದರ್ಭಗಳ ಆಳ ಪರಿಚಯವಿರುವ ಯಾರಿಗೇ ಆದರೂ ವಿದ್ಯಾವಂತ ಇಂಡಿಯಾದ ಭವಿಷ್ಯದ ಧರ್ಮ 'ಕ್ರಿಯಾಶೀಲ ಪ್ರೇಮದ ಮೂಲಕ ಕಾರ್ಯಶೀಲ ವೇದಾಂತ ಅಥವಾ ವಿರಕ್ತಿ' ಎಂಬುದು ಗೋಚರಿಸುತ್ತದೆ.

ಅಪ್ಪಟ ಪ್ರೇಮ ಮತ್ತು ಜ್ಞಾನದಿಂದ ಅಪ್ಪಟ ಕರ್ಮ ಹೊರತಲ್ಲ. ನಮ್ಮ ಜೀವನದ ಪ್ರತಿಯೊಂದು ಕ್ರಿಯೆ, ಭಾವನೆ ಮತ್ತು ಚಿಂತನೆಯನ್ನು ದೇವರುಗಳಿಗೆ ಅರ್ಪಿಸುವ ಯಜ್ಞದಂತೆ ಮಾಡುತ್ತದೆ 'ಶ್ರುತಿ' (ಕಾರ್ಯಶೀಲ ವೇದಾಂತ).

ವೇದಾಂತದ ಭಾಷೆಯಲ್ಲಿ 'ದೇವ' ಎಂದರೆ ಕಾರ್ಯಶಕ್ತಿ ಈಯುವ ಜೀವನಾಡಿ ಮತ್ತು ವಿವಿಧ ಸಾಮರ್ಥ್ಯಗಳಿಗೆ ಬೆಳಕು. ಬ್ರಹ್ಮಾಂಡದ ದೃಷ್ಟಿಯಿಂದ ನೋಡಿದರೆ ಇಂದ್ರಿಯ ಸಾಮರ್ಥ್ಯಗಳ ದೇವ ದೇವತೆಗಳು ಆ ಸಾಮರ್ಥ್ಯವನ್ನು ಸೂಚಿಸುತ್ತಾರೆ. (ಹೋಲಿಸಿ ನೋಡಿ – ಆಧ್ಯಾತ್ಮಿಕ ಮತ್ತು ಆಧಿ ದೈವಿಕ.) ಉದಾಹರಣೆಗೆ 'ಚಕ್ಷು ದೇವತೆ' ಸಕಲ ಜೀವರಾಶಿಗಳ ದೃಷ್ಟಿಯಾಗಿದ್ದಾನೆ. 'ಆದಿತ್ಯ'ನೆಂದು ಕರೆಯಲ್ಪಡುವ ಈ ದೇವತೆಗೆ ಜಗದ ಕಣ್ಣಾದ ಸೂರ್ಯ ಸಂಕೇತ. ಹೀಗೆ ಕರಗಳ ದೇವತೆ



'ಇಂದ್ರ'ನೇ ನಮ್ಮ ಕೈಗಳ ಶಕ್ತಿ. ಪಾದಗಳ ದೇವತೆ 'ವಿಷ್ಣು'ವಿನಿಂದ ನಮ್ಮೆಲ್ಲರ ಪಾದಗಳಿಗೆ ಬಲ – ಹೀಗೆ.

ಎಂತಲೇ ದೇವತೆಗಳಿಗೆ ಯಜ್ಞ ಹವನಾದಿಗಳನ್ನು ಮಾಡುವುದೆಂದರೆ ವೈಯಕ್ತಿಕ ಇಂದ್ರಿಯ ಸಾಮರ್ಥ್ಯಗಳನ್ನು ಅವುಗಳಿಗೆ ಅನುಗುಣವಾದ ಬ್ರಹ್ಮಾಂಡದ ಶಕ್ತಿಗಳಿಗೆ ಅರ್ಪಿಸುವುದು ಎಂದರ್ಥ. ಇಂದ್ರನಿಗೆ ಅರ್ಪಣೆ ಮಾಡಿದರೆ ಭೂಮಿಯ ಎಲ್ಲ ಕೈಗಳಿಗೂ ಒಳಿತಾಗಲಿ ಎಂದು ಮಾಡಿದಂತೆ. ಆದಿತ್ಯನಿಗೆ ಹೋಮ ನೆರವೇರಿಸಿದರೆ ಎಲ್ಲ ನೇತ್ರಗಳಲ್ಲಿಯೂ ಪರಮಾತ್ಮನ ಅಸ್ತಿತ್ವವನ್ನು ಅರಿತು ಅವನ್ನೆಲ್ಲ ಗೌರವಿಸಿದಂತೆ; ಅಯೋಗ್ಯ ವರ್ತನೆಯಿಂದ ಯಾವ ನೇತ್ರಗಳನ್ನೂ ಅವಮಾನಿಸದೆ, ನಮ್ಮೆಡೆಗೆ ಬೀರಿದ ಚಕ್ಷುಗಳಿಗೆ ಮಂದಹಾಸ, ಹಾರೈಕೆ, ಪ್ರೀತಿ ಮತ್ತು ಕರುಣೆಯನ್ನು ಹರಿಸಿದಂತೆ; ಅಹಂಭಾವವನ್ನು ಸಂಪೂರ್ಣವಾಗಿ ತೊರೆದು ನಮ್ಮ ನೇತ್ರಗಳನ್ನು ಭಕ್ತಿಯಿಂದ ವಿಶ್ವನೇತ್ರನಿಗೆ ಅರ್ಪಿಸಿದಾಗ ನಮ್ಮ ಕಣ್ಣುಗಳ ಮೂಲಕ ಅವನು ಹೊಳೆದಂತೆ. ಬೃಹಸ್ಪತಿಗೆ ಅರ್ಪಣೆ ಮಾಡಿದರೆ ಭುವಿಯ ಒಳಿತಿಗಾಗಿ ಹಾರೈಸುತ್ತಾ ನಮ್ಮ ವೈಯಕ್ತಿಕ ಚಿಂತನೆಗಳನ್ನು ಪೃಥ್ವಿಯ ಸಮಸ್ತ ಚಿಂತನೆಗಳಿಗೆ ಅಥವಾ ಅದರ ಒಳಿತಿಗಾಗಿ ಅರ್ಪಿಸಿದಂತೆ. 'ನಾನು ಎಂದರೆ ನನ್ನ ದೇಶದ ಜನ ಮತ್ತು ನನ್ನ ಒಳಿತನ್ನು ಅವರ ಒಳಿತಿನೊಂದಿಗೆ ಮಿಳಿತಗೊಳಿಸಿ ಅವರ ಸಂತೋಷದಲ್ಲಿ ಪಾಲ್ಗೊಂಡು ಆನಂದಿಸುವ' ಭಾವ.

ಸಂಕ್ಷಿಪ್ತವಾಗಿ ಹೇಳುವುದಾದರೆ, 'ಯಜ್ಞ'ವೆಂದರೆ ವಾಸ್ತವದಲ್ಲಿ ತನ್ನ ನೆರೆಯವನೆಂದರೆ ತಾನೇ ಎಂದು ಅರಿಯುವುದು, ಇತರರೊಂದಿಗೆ ಒಂದಾಗಿ ಅಥವಾ ಸಮನಾಗಿ ತನ್ನನ್ನು ಭಾವಿಸುವುದು, ತನ್ನ ಅಲ್ಪಾತ್ಮವನ್ನು ತೊರೆದು ಸಕಲಾತ್ಮವಾಗುವುದು. ಇದು ಸ್ವಾರ್ಥವನ್ನು ಶಿಲುಬೆಗೇರಿಸಿದಂತೆ ಮತ್ತು ಸಕಲಾತ್ಮಕ್ಕೆ ಮರುಹುಟ್ಟು ನೀಡಿದಂತೆ. ಒಂದು ಭಕ್ತಿಯಾದರೆ, ಮತ್ತೊಂದು ಜ್ಞಾನ.

**ಓ ಸಕಲವೇ (ಓಂ!)**
ನನ್ನ ಬದುಕು
ವಿನೀತ ಅರ್ಪಣೆಯಾಗಲಿ ನಿನಗೆ ಸಕಲವೇ
ನನ್ನ ಕೈಗಳು
ನಿನಗಾಗಿ, ಹೌದು, ನಿನಗಾಗಿ ದುಡಿಯಲಿ, ಸೇವೆ ಮಾಡಲಿ
ನನ್ನ ಹೃದಯ
ಪ್ರಭುವೇ, ನಿನ್ನಿಂದ ತುಂಬಿರಲಿ
ನನ್ನ ಕಂಗಳು
ದೇವಾ, ನಿನ್ನಿಂದ ಮತ್ತವಾಗಿರಲಿ
ನನ್ನ ಮನ

ಸದಾ ನಿನ್ನ ಮಂದಿರವಾಗಲಿ.

ಈ ಅರ್ಪಣೆಯನ್ನು ಸಂಪೂರ್ಣವಾಗಿ ನೆರವೇರಿಸಿದಲ್ಲಿ ತತ್–ತ್ವಂ–ಅಸಿ (ಅದು ನೀನೇ) ಎಂಬ ಪರಮಾನಂದದ ಮಹತ್ವದ ಅರಿವಾಗುತ್ತದೆ.

ದೇಶಭಕ್ತನಾಗಬೇಕೆಂದಿದೆಯೇ? ದೇಶ ಮತ್ತು ದೇಶದ ಜನರೊಂದಿಗೆ ಪ್ರೇಮವನ್ನು ಬೆಸೆದುಕೊಳ್ಳಬೇಕು; ಅವರೊಂದಿಗೆ ಒಂದಾಗಬೇಕು. ನಿನ್ನ ಪ್ರಸ್ತುತ ವ್ಯಕ್ತಿತ್ವದ ಛಾಯೆ ಕೂಡಾ ನಿನ್ನ ಮತ್ತು ನಿನ್ನ ಜನರ ನಡುವಿನ ಅಂತರದ ತೆಳು ಗಾಜು ಆಗಬಾರದು. ಸ್ವಂತ ಬದುಕನ್ನು ಬದಿಗಿರಿಸಿ ಪೃಥ್ವಿಯ ಒಳಿತಿಗಾಗಿ ಶ್ರಮಿಸುವ ಅಪ್ಪಟ ಆಧ್ಯಾತ್ಮಿಕ ಸಿಪಾಯಿಯಾಗಬೇಕು. ನಮ್ಮೊಳಗಿನ ಅಲ್ಪ ಅಹಮಿಕೆಯನ್ನು ತೊರೆದು, ಆ ಮೂಲಕ ಇಡಿಯ ದೇಶದೊಂದಿಗೆ ಒಂದಾದರೆ ನಾವು ಏನೇ ಅನುಭವಿಸಿದರೂ ದೇಶ ನಮ್ಮೊಂದಿಗೆ ಅನುಭವಿಸುತ್ತದೆ. ಮುನ್ನಡೆದರೆ, ದೇಶ ಹಿಂಬಾಲಿಸುತ್ತದೆ. ನಮ್ಮ ಶಕ್ತಿ ಜನರ ನಾಡಿಗಳಲ್ಲಿ ಮಿಡಿಯತೊಡಗುತ್ತದೆ. 'ನಾನೇ ಭಾರತ ಇಡೀ ಭಾರತ ಅಂತ ನನಗನಿಸಿದರೆ ನಾನು ಅಡಿಯಿಡುವಾಗೆಲ್ಲ ಭಾರತ ನಡೆಯುತ್ತಿರುತ್ತದೆ; ನಾನು ಉಸಿರಾಡುವಾಗ ಭಾರತ ಉಸಿರಾಡುತ್ತದೆ; ನಾನು ನುಡಿಯುವಾಗ ಭಾರತ ನುಡಿಯುತ್ತಿರುತ್ತದೆ.'

ಇದು ದೇಶಾಭಿಮಾನದ ಪರಮ ಸಾಕ್ಷಾತ್ಕಾರ, ಮತ್ತು ಇದೇ ಕಾರ್ಯಶೀಲ ವೇದಾಂತ.

* * * *



## ೯. ಭಾರತ ಮತ್ತು ಅಮೆರಿಕ

ವಿಚಿತ್ರ! ತಮ್ಮ ಶಾಸ್ತ್ರಗಳಲ್ಲಿರುವ ವೇದಾಂತದ ಸಾರ್ವಕಾಲಿಕ ಚಿಲುಮೆಯನ್ನು ಹೊಂದಿರುವ ಭಾರತೀಯರು ಟಾಂಟಲಸನಂತೆ ತಾಪ ಅನುಭವಿಸುತ್ತಿದ್ದಾರೆ. ಅವರು ಆ ಚಿಲುಮೆಯ ನೀರನ್ನು ಕುಡಿಯುತ್ತಿಲ್ಲ . . . . ಹೆಚ್ಚಿನ ಪಂಡಿತರು ವೇದಾಂತವನ್ನು ಓದುವುದು ಒಂದೇ ಒಂದು ಪ್ರಯೋಗವನ್ನೂ ಮಾಡದ ತಥಾಕಥಿತ ರಸಾಯನಶಾಸ್ತ್ರ ವಿದ್ಯಾರ್ಥಿಯಂತೆ. ಹೆಚ್ಚಿನ ಸನ್ಯಾಸಿಗಳು ನಿಜವಾದ ಸ್ವಾಮಿ, ಗುರುಗಳಾಗುವುದರ ಬದಲು ತಾವೇ ಸ್ವತಃ ಜಾತಿಗಳ ದಾಸರು, ಗುಲಾಮರು. ವೇದಾಂತದ ಪ್ರೊಫೆಸರುಗಳಂತೂ ಭಾರತದಲ್ಲಿ ಬೇಕಾದಷ್ಟು ಮಂದಿ ಸಿಗುತ್ತಾರೆ. ಆದರೆ ಇವರೆಲ್ಲ, ಬಲೂನುಗಳ ಹಾರುವಿಕೆ, ಹಡಗುಗಳ ತೇಲುವಿಕೆ, ಈಚಿನ ಮೂಲತತ್ವಗಳ ಕುರಿತು ಪಾಠ ಮಾಡುವ, ಆದರೆ ಸ್ವತಃ ಒಂದು ಕಾಲ್ಹೊಳೆಯನ್ನೂ ದಾಟಿ ಅನುಭವವಿಲ್ಲದ, ವಿಶ್ವವಿದ್ಯಾಲಯಗಳ ಹೈಡ್ರೋಡೈನಮಿಕ್ಸ್ ಪ್ರೊಫೆಸರ್‌ಗಳಂತೆ.

ನೀವು, ಅಮೆರಿಕಾದ ಜನರು...... ಹೈಡ್ರೋಸ್ಟಾಟಿಕ್ಸ್‌ನ ಮೂಲತತ್ವಗಳ ತಾತ್ವಿಕ ಜ್ಞಾನವನ್ನು ಹೊಂದಿರುವ ಯಾವ ಸೋಗೂ ಇಲ್ಲದ, ಆದರೆ ತನಗರಿವಿಲ್ಲದೇನೇ ಒಬ್ಬ ಪ್ರೊಫೆಸರನಿಗಿಂತ ಹೆಚ್ಚಾಗಿ ಆ ಎಲ್ಲ ತತ್ವಗಳನ್ನು ತನ್ನ ಕಾರ್ಯದಲ್ಲಿ ಅಳವಡಿಸಿಕೊಂಡ ಕಾರ್ಯಶೀಲ ಅಂಬಿಗನಂತೆ.

ಹೀಗಾಗಿ ಓ ಅಮೆರಿಕನ್ನರೇ! ಭಾರತದ ಮತ್ತು ಸಮಸ್ತ ಜಗತ್ತಿನ ಒಳಿತಿಗಾಗಿ ನಿಮ್ಮ ಕಾರ್ಯಶೀಲ ಶಕ್ತಿಗಳನ್ನು ವೇದಾಂತದ ಆಧ್ಯಾತ್ಮಿಕ ಓಜಸ್ಸಿನೊಂದಿಗೆ ಏಕೀಭವಿಸಿ ಆ ಪರಿಪೂರ್ಣ ಸಂಸ್ಕೃತಿಯನ್ನು ಭಾರತಕ್ಕೆ ಕೊಡಬಲ್ಲಿರಾ? ಸದ್ಯದಲ್ಲಿ ಭಾರತದ ಸ್ವಾಮಿಗಳು, ಪಂಡಿತರು ತಮ್ಮ ಜನಾಂಗದ ಜಡ ನಿದ್ರೆಯನ್ನು ಮತ್ತಷ್ಟು ದೀರ್ಘಗೊಳಿಸುವಂತಹ ಜೋಗುಳವನ್ನಷ್ಟೇ ಹಾಡುತ್ತಿದ್ದಾರೆ!

ತಾಂತ್ರಿಕ ಮತ್ತು ಕೈಗಾರಿಕಾ ಕಾಲೇಜುಗಳನ್ನು, ಸಂಸ್ಥೆಗಳನ್ನು ತೆರೆಯುವುದರಿಂದ ಸಮಸ್ಯೆ ಬಗೆಹರಿಯುತ್ತದೆ ಎನ್ನುತ್ತಾರೆ ಕೆಲವರು. ಹಾಗಾಗುತ್ತದೆಯೇ? ಇಲ್ಲ. ಅಂತಹ ಸಂಸ್ಥೆಗಳು ತಾತ್ಕಾಲಿಕ ಪರಿಹಾರವನ್ನು ತರಬಹುದು. ಆದರೆ ನಿಜವಾದ ಕಷ್ಟ, ಪ್ರಮುಖ ಸಮಸ್ಯೆ, ಮತ್ತು ಅತೀವ ವ್ಯಥೆಗಳನ್ನು ನಿವಾರಿಸುವುದು ಕೇವಲ ಭಾರತದ ಕೈಗಾರಿಕಾ ಕಾಲೇಜುಗಳಿಂದ ಸಾಧ್ಯವಿಲ್ಲ. ಸದ್ಯ ಭಾರತದ ಕಾರ್ಮಿಕರಿಗೆ ತಮ್ಮ ಕೆಲಸಕ್ಕೆ ಎಷ್ಟು ಸಿಗುತ್ತದೆ? ಉದಾಹರಣೆಗೆ

ಒಬ್ಬ ಕುಂಬಾರನನ್ನು ತೆಗೆದುಕೊಳ್ಳಿ. ಆತ ಬಹಳ ದಿನ ಶ್ರಮಿಸಿ ಇಪ್ಪತ್ತು ಮಡಕೆಗಳು, ತಟ್ಟೆಗಳನ್ನು ಮಾಡುತ್ತಾನೆ. ಆತನ ದೀರ್ಘ ಶ್ರಮಕ್ಕೆ ಆತನಿಗೆ ಸಿಗುವುದು ಇಪ್ಪತ್ತು ಮಡಕೆಗಳಿಗೆ ಒಂದು ಸೆಂಟ್! ಇಪ್ಪತ್ತು ಮಡಕೆಗಳಿಗೆ ಒಂದು ಸೆಂಟ್!! ಕೆಲವು ಕಾರ್ಮಿಕರಿಗೆ ತಮ್ಮ ಸುದೀರ್ಘ ದಿನದ ಕೆಲಸಕ್ಕೆ ಅಂದಾಜು ಐದು ಸೆಂಟ್ ಸಿಗಬಹುದು!! ಆದರೆ ಅಮೆರಿಕಾದಲ್ಲಿ ನಿಮ್ಮ ಸಾಮಾನ್ಯ ಕಾರ್ಮಿಕನಿಗೆ ಸಿಗುವುದೆಷ್ಟು? ದಿನವೊಂದಕ್ಕೆ ಎರಡು ಡಾಲರ್! ಭಾರತೀಯರಿಗೆ ಯಾಕಿಷ್ಟು ಅಲ್ಪ ದುಡಿಮೆ? ಅವರ ಬಟ್ಟೆ, ಮನೆ ಬಡತನದಿಂದ ಕೂಡಿರುತ್ತದೆ. ಆರಾಮದ ಕ್ಷಣಗಳೆಂಬುದು ಅವರ ಬದುಕಿನಲ್ಲಿ ಬಹು ಅಪರೂಪ. ಯಾಕೆ ಹೀಗೆ? ಯಾಕೆಂದರೆ ದೇಶದ ಮೂಲಧನ, ಬಂಡವಾಳ ಕಡಿಮೆ. ಇಲ್ಲಿನ ಬಂಡವಾಳವೆಲ್ಲ ಸೋರಿಹೋಗುತ್ತಿರುವುದು ತಮಗೆ ಕಾಣುವುದಿಲ್ಲವೆ?

ಈ ದೇಶದಲ್ಲಿ ಅಮೆರಿಕನ್ ಇಂಡಿಯನ್ನರಿಗೆ ಕಾರ್ಲೈಸಲ್ ಇನ್ಸ್ಟಿಟ್ಯೂಟ್ ಮತ್ತು ನೀಗ್ರೋಗಳಿಗೆ ಟಾಸ್‌ಗೆಗಾ ಇನ್ಸ್ಟಿಟ್ಯೂಟ್‌ಗಳಿರುವಂತೆ ಭಾರತದಲ್ಲೂ ಕೈಗಾರಿಕಾ ಕಾಲೇಜುಗಳನ್ನಾರಂಭಿಸಿದರೆ ಅದರಿಂದ ನಿಸ್ಸಂಶಯವಾಗಿ ತಕ್ಕಮಟ್ಟಿನ ಒಳಿತಾಗುತ್ತದೆ. ಶ್ರಮಿಸುವುದನ್ನೂ, ದುಡಿಯುವುದನ್ನೂ ಅದು ನಮ್ಮ ಜನರಿಗೆ ಕಲಿಸಿಕೊಡುತ್ತದೆ. ಆದರೆ ಅದೆಲ್ಲ ಯಾರ ಶ್ರೇಯಸ್ಸಿಗಾಗಿ, ಯಾರ ಪ್ರಗತಿಗಾಗಿ, ಯಾರ ಲಾಭಕ್ಕಾಗಿ? ದಯವಿಟ್ಟು ಹೇಳಿ. ಅವೆಲ್ಲ ಮೂಲತಃ ಇಂಗ್ಲೆಂಡಿನ ಬಂಡವಾಳಶಾಹಿಗಳ ವೈಭವೀಕರಣಕ್ಕಾಗಿ. ಇಂಡಿಯಾದ ಎಲ್ಲ ದೊಡ್ಡ ಉದ್ಯಮಗಳು ಇಂಗ್ಲೆಂಡಿನ ಉದ್ಯಮಿಗಳ ಮುಷ್ಟಿಯಲ್ಲಿವೆ. ಇಂಡಿಯಾದ ಉದ್ಯಮಿಗಳು ಕೇವಲ ಹೆಸರಿಗೆ ಬಂಡವಾಳಶಾಹಿಗಳು; ವಾಸ್ತವದಲ್ಲಿ ಯೂರೋಪು ಮತ್ತು ಅಮೆರಿಕಾದ ಬಂಡವಾಳಶಾಹಿಗಳು ಅವರ ಮೇಲೆ ಸವಾರಿ ಮಾಡುತ್ತಾರೆ. ಕೈಗಾರಿಕಾ ಕಾಲೇಜುಗಳು, ತರಬೇತಿ ಮುಂತಾದುವೆಲ್ಲಾ ಇದ್ದರೂ ಕಡೆಗೆ ಭಾರತೀಯರಿಗೆ ಏನು ಸಿಗುತ್ತದೆ? ಅವರಿಗೆ ಲಾಭವಿದೆಯೇ? ಅವರ ಬವಣೆಗಳೂ ಹಾಗೇ ಉಳಿಯುತ್ತವೆ; ಅವರ ಉಪವಾಸ ಮತ್ತು ಕ್ಷಾಮಗಳನ್ನು ಅವು ಪರಿಹರಿಸುತ್ತವೆಯೇ? ಒಂದು ಶಾಶ್ವತ ಪರಿಹಾರವೆಂದು ಸಿಗುವುದಾದರೆ ಅದು ಕೈಗಾರಿಕಾ ಕಾಲೇಜುಗಳಿಂದ ಬರುವುದಿಲ್ಲ. ಹಾಗಾದರೆ ನಮಗೇನು ಬೇಕು? ನಮಗೆ ಬಹಳಷ್ಟು ವಸ್ತುಗಳು ಬೇಕು. ಆದರೆ ಸದ್ಯಕ್ಕೆ ಅತ್ಯಂತ ಅಗತ್ಯವಿರುವುದು ಉಚ್ಚ ಮತ್ತು ಕೆಳ ಜಾತಿಗಳಿಗೆರಡಕ್ಕೂ ಶಿಕ್ಷಣ ನೀಡುವುದು; ಅವರಿಗೆ ತರಬೇತಿ ಕೊಡುವುದು; ಸ್ವಾತಂತ್ರ್ಯದ ಸತ್ವವನ್ನು ಅವರ ಮನದಾಳಕ್ಕಿಳಿಸುವುದು; ಸತ್ಯದ ನಿಸ್ವಾರ್ಥ ಶಕ್ತಿಯ ಗುಣವನ್ನು ಅವರೊಳಗೆ ತುಂಬುವುದು. ಇವು ಅಗತ್ಯ. ಈ ಸಮಗ್ರ ಸಂಸ್ಕೃತಿ ತಾಂತ್ರಿಕ ಶಿಕ್ಷಣವನ್ನು ಒಳಗೊಳ್ಳುತ್ತದೆ. ಆದರೆ ಕೈಗಾರಿಕೆಗಳಷ್ಟೇ ಸಾಲುವುದಿಲ್ಲ; ಕೈಗಾರಿಕೆಗಳು ಆನುಷಂಗಿಕವಷ್ಟೇ. ಅವುಗಳಿಗಿಂತ ಉನ್ನತವಾದುದೇನೋ ನಮಗೀಗ ತುರ್ತಾಗಿ



ಬೇಕಾಗಿದೆ..........

ಇಂಗ್ಲಿಷಿನ ಹೊರತಾಗಿ ಇನ್ಯಾವ ಉಪಯುಕ್ತ ಭಾಷೆಯನ್ನೂ ಯಾವ ವಿಶ್ವವಿದ್ಯಾಲಯವಾಗಲೀ, ಕಾಲೇಜಾಗಲೀ ಕಲಿಸುತ್ತಿಲ್ಲ. ಮುಂದೆ ಅವರು ಇಂಗ್ಲಿಷ್ ಆಫೀಸರುಗಳ ಕೈಕೆಳಗೆ ದುಡಿಯಬೇಕಾದುದರಿಂದ ಜನರಿಗೆ ಇಂಗ್ಲಿಷನ್ನೇ ಕಲಿಸಲಾಗುತ್ತಿದೆ..... ತಮ್ಮ ಸೇವೆಗೆ ಜನರು ತಯಾರಾಗಬೇಕಾದುದರಿಂದ ಅವರು ತಮ್ಮ ಭಾಷೆಯನ್ನು ಕಲಿಯಬೇಕು. ಗಣಿತ ಕಲಿಸಲಾಗುತ್ತದೆ. ಈ ವಿಶ್ವವಿದ್ಯಾಲಯಗಳಲ್ಲಿ ಕಲಿಸುವ ಗಣಿತದ ಮಟ್ಟ ಅಮೆರಿಕಾದ್ದಕ್ಕಿಂತ ಬಹಳ ಎತ್ತರದಲ್ಲಿದೆ. ಪರಾಭೌತಶಾಸ್ತ್ರ, ಊಹಾಧಾರಿತ ತತ್ವಶಾಸ್ತ್ರ ಮುಂತಾದ ಅಮೂರ್ತ ವಿಜ್ಞಾನ ವಿಷಯಗಳನ್ನು ಕಲಿಸುತ್ತಾರೆ. ಆದರೆ 'ಆರ್ಟ್ಸ್ ಕಾಲೇಜು' ಅಂತ ಹೆಸರಾದವು ಕೂಡಾ ಯಾವುದೇ ಕಾರ್ಯಶೀಲ ವಿಜ್ಞಾನ ಅಥವಾ ಉಪಯುಕ್ತ ಕಲೆಗಳನ್ನು ಕಲಿಸುವುದಿಲ್ಲ. ಆನ್ವಯಿಕ ರಸಾಯನಶಾಸ್ತ್ರವನ್ನು ಕಲಿಸಲಾಗುವುದಿಲ್ಲ; ವಿಶ್ವವಿದ್ಯಾಲಯಗಳಲ್ಲಿ ನೇಯ್ಗೆ ಮತ್ತು ಗಣಿಗಾರಿಕೆಯನ್ನು ಕಲಿಸುವುದಿಲ್ಲ. ಚಿತ್ರಕಲೆ, ಕುಂಬಾರಿಕೆ, ಮೆಕಾನಿಕಲ್ ಎಂಜಿನಿಯರಿಂಗ್ ಕಲಿಸುವುದಿಲ್ಲ. ಕೆಲ ಉಪಯುಕ್ತ ಕಲೆಗಳನ್ನು ಜನರಿಂದ ದೂರವಿರಿಸಿದ್ದಾರೆ. ಶಸ್ತ್ರಶಾಲೆಯನ್ನೇ ತೆಗೆದುಕೊಳ್ಳಿ. ಜನರು ತಮ್ಮ ಮನೆಯಲ್ಲಿ ಯಾವುದೇ ಶಸ್ತ್ರವನ್ನು ಇಟ್ಟುಕೊಳ್ಳುವ ಹಾಗಿಲ್ಲ. ತಮ್ಮ ಮನೆಯಲ್ಲಿ ಒಂದು ದೊಡ್ಡ ಚಾಕು ಕೂಡಾ ಇಡುವಂತಿಲ್ಲ; ಮನೆಯಲ್ಲಿ ದೊಡ್ಡ ಚಾಕು ಹೊಂದಿದವನನ್ನು ಜೈಲಿಗೆ ಹಾಕಲಾಗುತ್ತದೆ; ಶಸ್ತ್ರಶಾಲೆಯಾಗಲೀ, ಶಿಸ್ತಾಗಲೀ – ಇವೆರಡಕ್ಕೂ ಅನುಮತಿ ಇಲ್ಲ.

ಕೆಲವು ಸಿರಿವಂತ ಹಿಂದೂಗಳು ಅಥವಾ ಮುಸಲ್ಮಾನರು, ಭಾರತದ ಕಾಲೇಜುಗಳ ವಿಪರೀತ ಶುಲ್ಕಗಳನ್ನು ಕಟ್ಟಲು ಸಾಧ್ಯವಿರುವವರು ಎಂತಹ ಹುರುಳಿಲ್ಲದ ಶಿಕ್ಷಣವನ್ನು ಪಡೆದಿದ್ದಾರೆ ಎಂಬುದು ಇದರಿಂದ ನಿಮಗೆ ಅರ್ಥವಾಗುತ್ತದೆ.

ನೀವು ನಿಜಕ್ಕೂ ಭಾರತಕ್ಕಾಗಿ ಮಿಡಿದರೆ, ಇಂಡಿಯಾದ ಸಮಸ್ಯೆಗಳನ್ನು ಪ್ರಾಮಾಣಿಕತೆಯಿಂದ ಪರಿಗಣಿಸಿದರೆ, ಬಹಳಷ್ಟನ್ನು ಸಾಧಿಸಬಹುದು. 'ಮನಸ್ಸಿದ್ದಲ್ಲಿ ಮಾರ್ಗ......' ಮಾನವತೆಯ ಒಳಿತಿಗಾಗಿ ಇಂಡಿಯಾಗೆ ಏನನ್ನಾದರೂ ಮಾಡಬಯಸುತ್ತೀರಾ? ಹೃದಯಪೂರ್ತಿಯಾಗಿ ಭಾರತವನ್ನು ಪ್ರೀತಿಸುತ್ತೀರಾ? ಮುನ್ನೂರು ಮಿಲಿಯ ಜನರು ಎಂದರೆ ಜಗತ್ತಿನ ಒಟ್ಟು ಜನಸಂಖ್ಯೆಯ ಬಹುಪಾಲು. ಅವರಿಗೆ ತರಬೇತಿ ನೀಡಬಹುದು, ಶಿಕ್ಷಣ ಕೊಡಬಹುದು, ಅವರ ಶಕ್ತಿಯನ್ನು ಅದರ ಪರಮೋಚ್ಚ ಸ್ಥಿತಿಗೆ ತಲುಪಿಸಬಹುದು. ಈ ಮುನ್ನೂರು ಮಿಲಿಯ ಮಂದಿ ನಿಮ್ಮೊಂದಿಗೆ ದುಡಿಯಲು ಆರಂಭಿಸಿದರೆ, ನಿಮ್ಮಂತೆಯೇ ಆಲೋಚಿಸಲು ಆರಂಭಿಸಿದರೆ, ನೀವು ಚಿಂತಿಸುವ ಅಂಶಗಳನ್ನೇ ಅವರ ಮಿದುಳೂ ಚಿಂತಿಸಿದರೆ, ಅದರಿಂದ ನಿಮಗೆ ಸಹಾಯವಾಗುವುದಿಲ್ಲವೇ? ಸಣ್ಣ ಪುಟ್ಟ ಚಿಂತೆಗಳಿಂದ,

ತೊಂದರೆಗಳಿಂದ ಇಂಡಿಯನ್ನರ ಬುದ್ಧಿಶಕ್ತಿ ಮತ್ತು ಕ್ರಿಯಾಶಕ್ತಿಯೆಲ್ಲಾ ಸೋರಿಹೋಗದಿದ್ದರೆ, ಉನ್ನತ ವಿಚಾರಗಳು ಮತ್ತು ಉತ್ತಮ ಭಾವನೆಗಳಲ್ಲಿ ಅವರ ಮನಸ್ಸು ತೊಡಗಿಕೊಂಡರೆ, ಅಮೆರಿಕಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಫ್ರಾಂಕ್ಲಿನ್ನರನ್ನು, ಎಡಿಸನ್ನರನ್ನು ಇಂಡಿಯಾ ಉತ್ಪಾದಿಸಬಲ್ಲುದು. ಹಾಗಾದರೆ ಇಂಡಿಯಾದ ಶಕ್ತಿಗಳನ್ನು ಬಳಸಿಕೊಂಡರೆ ಜಗತ್ತು ಮತ್ತಷ್ಟು ಶ್ರೀಮಂತವಾಗುವುದಿಲ್ಲವೇ? ಜಗತ್ತನ್ನು ಸಿರಿವಂತಗೊಳಿಸಲು, ನಿಮ್ಮ ಸಹಜೀವಿಗಳಿಗೆ ಸಹಾಯ ಮಾಡಲು ನಿಮಗೇ ಉಪಕಾರ ಮಾಡಿಕೊಳ್ಳಲು, ಇಂಡಿಯಾಕ್ಕಾಗಿ ಮಿಡಿಯಿರಿ. ನಿಮ್ಮದೇ ಮಟ್ಟಕ್ಕೆ ಅವರನ್ನು ತರಲು ಪ್ರಯತ್ನಿಸಿ. ಇದನ್ನು ಆಗುಮಾಡಬೇಕು. ಹೇಗೆ?

ರಾಮನ ಎರಡು ಸಲಹೆಗಳಿವೆ. ಒಂದು, ಪ್ರಾಮಾಣಿಕ ಉದ್ದೇಶಗಳನ್ನುಳ್ಳ, ಸತ್ವದ ವೀರರಾದ ಅಮೆರಿಕನ್ನರನ್ನು ಇಂಡಿಯಾಕ್ಕೆ ಕಳಿಸುವುದು. ಅಮೆರಿಕಾದ ತ್ಯಾಜ್ಯವನ್ನು ನಮಗೆ ಕಳುಹಿಸಬೇಡಿ. ಅಮೆರಿಕಾದಲ್ಲಿ ನಿರುದ್ಯೋಗಿಗಳಾಗಿರುವವರನ್ನು ಇಂಡಿಯಾದ ಜನರ ಮೇಲೆ ಕೂರಿಸಬೇಡಿ. ಅಮೆರಿಕಾ ಸಮಾಜದ ಉತ್ಕೃಷ್ಟ ವರ್ಗವನ್ನು ಇಂಡಿಯಾಕ್ಕೆ ಕಳಿಸಿ. ಅದು ಅಗತ್ಯ. ಜನರ ನಡುವೆಯಿದ್ದು ಕೆಲಸ ಮಾಡಬಲ್ಲಂತಹ, ತಾವು ಹಸಿದುಕೊಂಡಾದರೂ ಬಡವರ ನೆರವಿಗೆ ಒದಗುವಂತಹ ಮಂದಿ ಬೇಕಾಗಿದ್ದಾರೆ. ಇಂತಹ ಕೆಲಸವನ್ನು ಸಂತಸದಿಂದ ಕೈಗೆತ್ತಿಕೊಳ್ಳಲು ಬಹಳ ಮಂದಿ ಸಜ್ಜನರು ಮುಂದೆ ಬರಬಹುದು ಎಂಬ ನಿರೀಕ್ಷೆ ರಾಮನಿಗೆ. ಇಂಡಿಯಾಕ್ಕೆ ಬಂದು, ಸಾಮಾನ್ಯವಾಗಿ ಭವ್ಯ ಬಂಗಲೆಗಳಲ್ಲಿದ್ದುಕೊಂಡು ಜನರನ್ನು ಆಳುತ್ತಾ, ವಾಹನಗಳಲ್ಲಿ ತಿರುಗಾಡುತ್ತಾ, ಲೌಕಿಕ ಸಂಪತ್ತು ಮನ್ನಣೆಗಳಲ್ಲಿ ಮುಳುಗಿರುವ ಧರ್ಮಪ್ರಚಾರಕರು ಇಂಡಿಯಾಕ್ಕೆ ಬೇಡ ಎಂಬುದು ರಾಮನ ಅಭಿಮತ. ಇಂಥವರು ಇಂಡಿಯಾವನ್ನು ಮೋಕ್ಷಮಾರ್ಗದಲ್ಲಿ ಕೊಂಡೊಯ್ಯಲಾರರು. ಸತ್ಯಕ್ಕಾಗಿ ದುಡಿಯಬಲ್ಲಂಥವರು, ನಿಜವಾದ ಪರಿಶ್ರಮಿಗಳು, ಹರಿಜನರೊಂದಿಗೆ ನೆಲದ ಮೇಲೆ ಮಲಗಲೂ ಸಿದ್ಧವಿರುವ ತ್ಯಾಗ ಮನೋಭಾವದ ಮಂದಿ, ಅವರೊಂದಿಗೆ ತಾವೂ ಮಾಸಿದ ಹರಕಲು ಬಟ್ಟೆ ತೊಟ್ಟು ತೃಪ್ತರಾಗಿರುವ, ಅವರೊಂದಿಗೆ ಹಸಿದುಕೊಂಡಿರುವ, ಅರ್ಧ ಬೆಂದ ಅಥವಾ ಒರಟು ರೊಟ್ಟಿ ತುಂಡುಗಳನ್ನು ಅವರೊಂದಿಗೆ ಸೇವಿಸಬಲ್ಲಂತಹವರ ಅಗತ್ಯ ನಮಗಿದೆ. ತಮ್ಮ ದೈಹಿಕ ಐಷಾರಾಮಗಳನ್ನು, ಸ್ವಂತದ ಸವಲತ್ತುಗಳನ್ನು ತೊರೆಯಬಲ್ಲಂಥವರು ನಮಗೆ ಬೇಕು. ಇನ್ನೊಬ್ಬರ ಉದ್ಧಾರಕ್ಕಾಗಿ ನಾವು ಕೆಲಸ ಮಾಡಿದಾಗ, ಅವರ ಉನ್ನತಿ ಆಗುತ್ತದೋ ಬಿಡುತ್ತದೋ, ನಮ್ಮಲ್ಲಿ ಖಂಡಿತವಾಗಿ ಒಂದು ಬಗೆಯ ಆತ್ಮೋನ್ನತಿಯಾಗುತ್ತದೆ ಎಂಬುದು ನನ್ನ ಸ್ವಂತ ಅನುಭವ. ಕ್ರಿಯೆ ಮತ್ತು ಪ್ರತಿಕ್ರಿಯೆ ಸಮಾನ ಮತ್ತು ವಿರುದ್ಧವಾಗಿರುತ್ತವೆ? ಅದೊಂದು ಮಿಥ್ಯೆ. ಇತರರಿಗೆ ಲಾಭವಾಗುತ್ತದೆ



ಎಂಬ ಭಾವನೆಯಿಂದ ಯಾವುದೇ ಕೆಲಸ ಕೈಗೊಳ್ಳುವುದು ಅಸಂಬದ್ಧ. ಅಮೆರಿಕನ್ನರೇ, ನಿಮಗೆ ರಾಮನ ಮಾತುಗಳಿಂದ ಲಾಭವಾಗಿರಬಹುದು, ಆಗದಿರಬಹುದು; ಆದರೆ ರಾಮನಿಗೆ ಅದರಿಂದ ಲಾಭವಾಗಿದೆ. ಅಷ್ಟು ಪ್ರತಿಫಲ ಸಾಕು. ಪ್ರತಿಯೊಬ್ಬರೂ ಇಂತಹ ಅನುಭವ ಹೊಂದಿರುತ್ತಾರೆ. ಪ್ರತಿಫಲಾಪೇಕ್ಷೆಯಿಲ್ಲದೆ ಈ ಉದ್ದೇಶವನ್ನು ಕೈಗೆತ್ತಿಕೊಳ್ಳಿ. ನಿಸ್ವಾರ್ಥ ಕರ್ಮದಿಂದ ಋಣಕ್ಕೊಳಗಾಗುವ ದೇವರು, ಮಾಡಿದ ಕಾರ್ಯಕ್ಕೆ ಬಡ್ಡಿ ಸಮೇತ ಫಲ ನೀಡುತ್ತಾನೆ.

ಇಂಡಿಯಾವನ್ನು ಸಂದರ್ಶಿಸುವವರ ಮೊದಲ ಕರ್ತವ್ಯ ಇಂಡಿಯನ್ನರಲ್ಲಿ ಸಾಹಸ ಪ್ರವೃತ್ತಿಯನ್ನು ಹುಟ್ಟಿಸುವುದು. ಪಾಪದ ಜನ; ಅವರು ಜೀವಿಸುತ್ತಿರುವುದು ತಮ್ಮದೇ ಬಡ, ಚಿಕ್ಕ, ವೈಯಕ್ತಿಕ ಜಗತ್ತಿನಲ್ಲೇ ಹೊರತು ವಿಶಾಲ ವಿಶ್ವದಲ್ಲಲ್ಲ.

ಕಠಿಣ ಸಂಪ್ರದಾಯದ ಪ್ರಕಾರ ವಿದೇಶಗಳಿಗೆ ಹೋಗುವುದಿರಲಿ ಹಡಗನ್ನೇರುವುದು ಕೂಡಾ ಸಿಂಧುವಲ್ಲ. ಸಂಪ್ರದಾಯಕ್ಕೆ ಸಡ್ಡು ಹೊಡೆದು ಇತರ ದೇಶಗಳಿಗೆ, ವಿಶೇಷವಾಗಿ ಇಂಗ್ಲೆಂಡಿಗೆ ವಿದ್ಯಾಭ್ಯಾಸಕ್ಕಾಗಿ ತೆರಳುವ ಧೈರ್ಯ ಮಾಡುವ ಕೆಲ ಶ್ರೀಮಂತ ಹಿಂದೂಗಳು ಸಾವಿರಗಟ್ಟಲೆ ಇಂಡಿಯನ್ ಡಾಲರುಗಳನ್ನು ವಿದೇಶಗಳಲ್ಲಿ ವ್ಯಯಿಸುತ್ತಾರೆ. ಹೀಗೆ ವಿದ್ಯಾಭ್ಯಾಸ ಮುಗಿಸಿ ಅರ್ಹ ಬ್ಯಾರಿಸ್ಟರುಗಳಾಗಿಯೋ, ಲಾಯರುಗಳಾಗಿಯೋ ಇಂಡಿಯಾಕ್ಕೆ ಹಿಂದಿರುಗಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ವ್ಯಾಜ್ಯಗಳನ್ನು ಪ್ರೋತ್ಸಾಹಿಸಿ, ಬಡ ರೈತರಿಂದ, ಇತರ ಕಕ್ಷಿದಾರರಿಂದ ಸುಲಿದ ಹಣವನ್ನು ನಾಜೂಕು ಗಾಜಿನ ತಟ್ಟೆ, ಗ್ಲಾಸು, ಚಮಚ ಮುಂತಾದುವುಗಳನ್ನು, ಅಂದದ ಎಂಬ್ರಾಯ್ಡರಿ ವಸ್ತುಗಳನ್ನು, ಇಂಗ್ಲಿಷ್ ಚಿತ್ರಗಳನ್ನು, ವಿನಾಶಕಾರಿ ಇಂಗ್ಲಿಷ್ ಮಾದಕ ಪಾನೀಯಗಳನ್ನು ಕೊಳ್ಳುವುದರಲ್ಲಿ ಖರ್ಚುಮಾಡುತ್ತಾರೆ. ತಮ್ಮ ಬಡತನ ಮತ್ತು ಹಸಿವೆ ಮಿತಿಮೀರಿದಂತೆಲ್ಲಾ ಕಿರಿಕಿರಿ ಜಗಳಗಳು ಹೆಚ್ಚುವ ದೀನ ಕಾರ್ಮಿಕರಿಂದ ದೋಚಿದ ಧನದ ಇದೆಂಥ ನಿರುಪಯುಕ್ತ ಬಳಕೆ!

ಇಂಡಿಯಾದ ಬಡ ಜಾತಿಗಳ ಜನರಲ್ಲಿ ಜಪಾನೀಯರ ಸಾಹಸ ಮನೋಭಾವನೆಯನ್ನು ಪರಿಚಯಿಸುವ ಅಗತ್ಯವಿದೆ. ತಮ್ಮ ಹಡಗಿನ ಪಯಣಕ್ಕಾಗುವಷ್ಟು ಮಾತ್ರ ಹಣದೊಂದಿಗೆ ಜಪಾನೀ ಯುವಕರು ಅಮೆರಿಕಾಗೆ ಬರುತ್ತಾರೆ. ಅಮೆರಿಕಾದ ಸಭ್ಯರ ಮನೆಗಳಲ್ಲಿ ಕೆಲಸ ಮಾಡುತ್ತಾ ವಿವಿಧ ತರಗತಿಗಳಲ್ಲಿ ಪ್ರವೇಶ ಪಡೆದುಕೊಳ್ಳುತ್ತಾರೆ. ಅಮೆರಿಕಾದಲ್ಲಿ ಕೆಲಕಾಲ ಈ ರೀತಿ ಬದುಕಿನ ತರುವಾಯ ಜೇಬು ತುಂಬ ಹಣ, ಮೆದುಳು ತುಂಬ ಜ್ಞಾನ ಹೊತ್ತು ಜಪಾನಿಗೆ ಮರಳುತ್ತಾರೆ.

ಶಿಕ್ಷಣವೆಂದರೇನು? ಶಿಕ್ಷಣದ ಉದ್ದೇಶ ಸ್ವಾತಂತ್ರ್ಯವಲ್ಲದೆ ಬೇರೇನೂ ಅಲ್ಲ. ಶಿಕ್ಷಣ ನನಗೆ ಸ್ವಾತಂತ್ರ್ಯ ಮತ್ತು ಮೋಕ್ಷ ತರದಿದ್ದರೆ ಅದಕ್ಕೆ ಧಿಕ್ಕಾರ! ಅಂಥ ಶಿಕ್ಷಣ

ನನಗೆ ಬೇಡ. ಶಿಕ್ಷಣ ನನ್ನನ್ನು ಬಂಧಿಯಾಗಿರಿಸಿದರೆ ಅದು ನನಗೆ ಪ್ರಯೋಜನವಿಲ್ಲ. ಹೀಗಾಗಿ ಭಾರತೀಯರೊಳಗೆ ನಿಜವಾದ ಶಿಕ್ಷಣ ಅಥವಾ ಸ್ವಾತಂತ್ರ್ಯದ ಭಾವನೆ ಉದ್ದೀಪಿಸಬೇಕಾದರೆ ಅವರ ವಾತಾವರಣದ ಬದಲಾವಣೆಗೆ ಸಹಾಯ ಮಾಡಬೇಕು. ಇದನ್ನು ಮಾಡುವುದು ಹೇಗೆ? ಒಂದು ದಾರಿಯೆಂದರೆ ಭಾರತಕ್ಕೇ ಹೋಗಿ ಅವರಿಗೆ ಕಲಿಸುವುದು.

ಇದಕ್ಕಿಂತ ತಕ್ಷಣದ ದಾರಿಯೊಂದಿದೆ....... ಭಾರತದ ವಿಶ್ವವಿದ್ಯಾಲಯಗಳಿಂದ ಕೆಲವು ಪದವೀಧರರನ್ನು ನಿಮ್ಮ ಕೈಗಾರಿಕಾ, ಮೆಕಾನಿಕಲ್ ಮತ್ತು ಇತರ ಉಪಯುಕ್ತ ಉದ್ಯಮಗಳಲ್ಲಿ, ನಿಮ್ಮ ಶಸ್ತ್ರಶಾಲೆಗಳಲ್ಲಿ ಶಿಕ್ಷಣ ಪಡೆಯುವ ಸಲುವಾಗಿ ಅಮೆರಿಕಾಕ್ಕೆ ಆಹ್ವಾನಿಸುವುದು. ಇದು ಭಾರತಕ್ಕೆ ಸಹಾಯ ಮಾಡುವ ನೇರ ಮಾರ್ಗ. ಅಮೆರಿಕಾದಲ್ಲಿ ಶಿಕ್ಷಣ ಪಡೆಯುವ ಭರತೀಯರು ಸ್ವದೇಶಕ್ಕೆ ಮರಳಿ ಕೈಗಾರಿಕಾ ವಿಶ್ವವಿದ್ಯಾಲಯಗಳನ್ನು ಆರಂಭಿಸಬಹುದು. ಅವರಿಗೆ ಭಾರತದ ಬಡ ವರ್ಗ, ಭಾಷೆ, ರೀತಿನೀತಿ, ಸಂಪ್ರದಾಯಗಳ ಪರಿಚಯವಿರುವುದರಿಂದ, ಅಮೆರಿಕನ್ನರು ಮಾಡಬಹುದಾದ್ದಕ್ಕಿಂತ ಉತ್ತಮ ಕೆಲಸವನ್ನು ಭಾರತದ ಪ್ರೊಫೆಸರುಗಳು ಮಾಡಬಹುದು. ದೀನರಿಗೆ ಕಲಿಸಬೇಕಾದರೆ ಅವರ ಭಾಷೆ ಮತ್ತು ರೀತಿಗಳ ಅರಿವಿರಬೇಕು. ಇದು ಭಾರತೀಯರನ್ನು ಉದ್ಧರಿಸುವ ಅತ್ಯಂತ ಶಕ್ತ ಮತ್ತು ಸೂಕ್ತ ಮಾರ್ಗ.

ಅಮೆರಿಕಾದಲ್ಲಿ ತರಬೇತಿ ಪಡೆದ ಭಾರತದ ಪದವೀಧರರು ಕ್ರಿಯೆ ಮತ್ತು ಸ್ವಾತಂತ್ರ್ಯದ ಪ್ರಚಾರಕ್ಕಾಗಿ ತಮ್ಮ ತಾಯ್ನಾಡಿಗೆ ಮರಳಲಿ. ವಿಜ್ಞಾನ ಮತ್ತು ಕಲೆಯ ಧರ್ಮಕೋಶವನ್ನು ಅವರು ಭಾರತದಲ್ಲಿ ಬೋಧಿಸಲಿ. ತಮ್ಮದೇ ನೆಲದಲ್ಲಿ ಕಾರ್ಯಶೀಲ ವೇದಾಂತದ ಪ್ರಸರಣಕ್ಕೆ ಭಾರತದ ಜನರಿಗೆ ಸಹಾಯವಾಗಲಿ.

ಚೀನೀಯರು, ಜಪಾನೀಯರು, ರೆಡ್ ಇಂಡಿಯನ್ನರು, ಮತ್ತು ನೀಗ್ರೋಗಳಿಗೆಲ್ಲ ಅಮೆರಿಕಾ ಶಿಕ್ಷಣ ನೀಡುತ್ತಿದೆ. ಪ್ರಾಣಿಗಳ ಮೇಲಣ ಹಿಂಸೆಯನ್ನು ತಡೆಯಲೂ ಅಮೆರಿಕ ವಿವಿಧ ನೀತಿ ಅಳವಡಿಸಿಕೊಂಡಿದೆ. ಓ ಅಮೆರಿಕನ್ನರೆ! ಇಲ್ಲಿದ್ದಾರೆ ಹಿಂದೂಗಳು, ನಿಮ್ಮದೇ ರಕ್ತ ಮಾಂಸದವರು, ಆರ್ಯನ್ನರು – ಋಣಿಗಳು, ವಾತ್ಸಲ್ಯಮಯಿಗಳು, ವಿಧೇಯರು – ಇವರನ್ನು ಮರೆಯಬೇಡಿ.

* * * *



## ೧೦. ಮಾನವ ಕುಲ ಒಂದೇ

ನನಗಿಲ್ಲ ಜಾತಿ ಮತಗಳ ಚಿಂತೆ
ಇರುವುದೊಂದೇ, ಅದು ಕ್ರಿಯೆ

ವರ್ಗ, ವಂಶಗಳು? ಏನವು?
ಇರುವುದು ಮನುಜ ಮಾತ್ರ.

ಕಾಷಾಯ ತೊಡಲಿ, ಮೇಲುಡುಗೆಯಿರಲಿ
ಇರುವುದೊಂದೇ ಆತ್ಮ.

ಕಿರೀಟವಿರಲಿ, ಗರಿಗಳಿರಲಿ
ಮುಖ್ಯ, ಎದೆಯ ಗೂಡೊಳಗಣ ಹೃದಯ.

ಇರುವುದು ಬರೀ ಶ್ರದ್ಧೆ, ಆಶೆ
ಮತ್ತು ಇರಬೇಕೆಂಬ ಹೋರಾಟ

ಇರುವುದು ಕಾಣುವ ಮಿದುಳು ಮತ್ತು ಕಣ್ಣು
ಇರುವನೊಬ್ಬನೇ ದೇವ, ಇರುವುದೊಂದೇ ಮಾನವಕುಲ!

* * * *